# ಪುಂಗವ

ರಾಷ್ಟ್ರೀಯ ಜಾಗರಣ ಪತ್ರಿಕೆ






ಸಂಪುಟ : 37    ಸಂಚಿಕೆ : 20    ದುರ್ಮುಖಿ–ವೈಶಾಖ    ಕಲಿಯುಗಾಬ್ದ 5117    1–6–2016    ತ್ರೈವಾರ್ಷಿಕ : ರೂ. 150.00    ಬಿಡಿ ಪ್ರತಿ : ರೂ. 3.00    ಪುಟಗಳು : 4


# ಕುಸಿದಿದೆ 'ಕೇಸರಿ ಭಯೋತ್ಪಾದನೆ'ಯೆಂಬ ಹುಸಿ ಸೌಧ



ಈ ಶತಮಾನದಲ್ಲಿ ಮೂಲಭೂತವಾದಿ ಭಯೋತ್ಪಾದನೆಯಿಂದ ತೀವ್ರ ಸಂಕಷ್ಟಕ್ಕೆ ಒಳಗಾದ ದೇಶಗಳಲ್ಲಿ ಭಾರತವೂ ಒಂದು. ಗ್ಲೋಬಲ್ ಟೆರರಿಸಂ ಇಂಡೆಕ್ಸ್‌ನ ಅಂಕಿ ಅಂಶಗಳ ಪ್ರಕಾರ ಭಯೋತ್ಪಾದನೆಗೆ ಬಲಿಯಾದ ದೇಶಗಳ ಯಾದಿಯಲ್ಲಿ ಭಾರತ ಆರನೇ ಸ್ಥಾನದಲ್ಲಿ ನಿಲ್ಲುತ್ತದೆ. ಇರಾಕ್, ನೈಜೀರಿಯಾ, ಅಫಘಾನಿಸ್ತಾನ, ಪಾಕಿಸ್ತಾನ, ಸಿರಿಯಾ – ಈ ದೇಶಗಳು ಭಾರಕ್ಕಿಂತ ಮುಂಚಿನ ಸ್ಥಾನದಲ್ಲಿವೆ. ಈ ಎಲ್ಲ ದೇಶಗಳೂ ಇಸ್ಲಾಂ ರಾಷ್ಟ್ರಗಳಾಗಿದ್ದು ಜಿಹಾದಿ ಮೂಲಭೂತವಾದಿ ಭಯೋತ್ಪಾದನೆಗೆ ತಾವೇ ಬಲಿಯಾಗುತ್ತಿವೆ. ಗ್ಲೋಬಲ್ ಟೆರರಿಸಂ ಇಂಡೆಕ್ಸ್ ಅಂಕಿ ಅಂಶಗಳಲ್ಲಿ ಹೇಳಿರುವಂತೆ ಭಾರತದಲ್ಲಿ 2014–15ರಲ್ಲಿ 763 ಭಯೋತ್ಪಾದಕ ಘಟನೆಗಳು ವರದಿಯಾಗಿವೆ. ಭಾರತದ ಉಗ್ರ ಚಟುವಟಿಕೆಗಳಲ್ಲಿ ಇಸ್ಲಾಮಿ ಭಯೋತ್ಪಾದನೆ ಹಾಗೂ ಮಾವೋವಾದಿ ಉಗ್ರಗಾಮಿಗಳ ಉಪಟಳವನ್ನು ಸ್ಪಷ್ಟವಾಗಿ ಕಾಣಬಹುದು.

ಆದರೆ ಈ ದೇಶದ ದುರದೃಷ್ಟ ಉಗ್ರವಾದದ ವಿರುದ್ಧ ಒಂದಾಗಿ ಹೋರಾಡಬೇಕಾದುದಕ್ಕೆ ಬದಲಾಗಿ 2007 ಹಾಗೂ 2008ರ ನಡುವೆ ನಡೆದ ಮಾಲೆಗಾಂವ್ ಬಾಂಬ್ ಸ್ಫೋಟ, ಸಮಝೋತಾ ಎಕ್ಸ್‌ಪ್ರೆಸ್ ರೈಲು ಬಾಂಬ್ ಸ್ಫೋಟ ಪ್ರಕರಣ ಮೊದಲಾದ ಕೆಲವು ಭಯೋತ್ಪಾದಕ ಘಟನೆಗಳನ್ನು ಮುಂದಿಟ್ಟು ಹಿಂದು ರಾಷ್ಟ್ರವಾದಿ ಆಂದೋಲನವನ್ನು ಮಟ್ಟಹಾಕುವ, ರಾಜಕೀಯ ವಿರೋಧಿಗಳನ್ನು ಮೆಟ್ಟುವ ಕೆಲಸಕ್ಕೆ ಕಾಂಗ್ರೆಸ್ ಮತ್ತು ಸಹವರ್ತಿ ಪಕ್ಷಗಳು ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ದ್ವೇಷಿಸುವ ಒಂದು ವರ್ಗ ಪ್ರಯತ್ನಿಸಿತು. ಈ ಹಿನ್ನೆಲೆಯಲ್ಲಿ ಹಿಂದು ಉಗ್ರವಾದ, ಹಿಂದುತ್ವ ಭಯೋತ್ಪಾದನೆ, ಕೇಸರೀ ಭಯೋತ್ಪಾದನೆ, ಭಗವಾ ಭಯೋತ್ಪಾದನೆ ಮೊದಲಾದ ಅನೇಕ ಪದಗುಚ್ಛಗಳನ್ನು ಹುಟ್ಟಿಸಿ ಮೂಲಭೂತವಾದಿ ಹಿಂದುತ್ವ ಉಗ್ರವಾದ ಎನ್ನುವುದಿದೆ ಎಂದು ನಂಬಿಸುವ ಪ್ರಯತ್ನ ಕಳೆದ ಎಂಟೊಂಭತ್ತು ವರ್ಷದಿಂದ ನಿರಂತರ ನಡೆದಿದೆ.

ಈ ಧೂರ್ತ ಯೋಜನೆಯ ಅಂಗವಾಗಿ ಮಾಲೆಗಾಂವ್ ಸ್ಫೋಟ ಮತ್ತು ಸಮಝೋತಾ ಎಕ್ಸಪ್ರೆಸ್ ರೈಲು ಬಾಂಬ್ ಸ್ಫೋಟ ಪ್ರಕರಣದಲ್ಲಿ ಅಭಿನವ ಭಾರತ ಎನ್ನುವ ಸಂಘಟನೆಗೆ ಸೇರಿದ ಸಾಧ್ವಿ ಪ್ರಜ್ಞಾ ಸಿಂಗ್, ಸ್ವಾಮೀ ಅಸೀಮಾನಂದ, ಕರ್ನಲ್ ಪುರೋಹಿತ್ ಸೇರಿದಂತೆ ಅನೇಕರ ಮೇಲೆ ಮಿಥ್ಯಾ ಆರೋಪವನ್ನು ಹೊರಿಸಿ ಜೈಲಿನಲ್ಲಿ ಬಂಧಿಸಿಡಲಾಯಿತು. ಆರೆಸ್ಸೆಸ್‌ನ ಇಂದ್ರೇಶ ಕುಮಾರ್ ಮೇಲೆ ಆರೋಪ ಹೊರಿಸುವ ಪ್ರಯತ್ನವನ್ನು ಮಾಡಲಾಯಿತು.


*2ನೇ ಪುಟಕ್ಕೆ*


## ಸಾಧ್ವಿ ಪ್ರಜ್ಞಾ

ಮಧ್ಯಪ್ರದೇಶದ ಭಿಂಡ್ ಜಿಲ್ಲೆಯ ಕಛ್ವಾಹಾ ಗ್ರಾಮದಲ್ಲಿ ಆಯುರ್ವೇದ ವೈದ್ಯರಾಗಿದ್ದ ಸಿ.ಪಿ. ಠಾಕೂರ್ ಅವರ ಎರಡನೇ ಪುತ್ರಿಯೇ ಪ್ರಜ್ಞಾ ಸಿಂಗ್. ಆರೆಸ್ಸೆಸ್ ಸ್ವಯಂಸೇವಕರಾಗಿದ್ದ ತಂದೆಯಿಂದ ಪ್ರಭಾವಿತರಾದ ಪ್ರಜ್ಞಾ ಸಿಂಗ್ ಬಾಲ್ಯದಲ್ಲಿಯೇ ಸಂಘ ಪರಿವಾರದ ಚಟುವಟಿಕೆಗಳಲ್ಲಿ ಗುರುತಿಸಿಕೊಂಡಿದ್ದಳು. ಕಾಲೇಜು ದಿನಗಳಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ (ಎಬಿವಿಪಿ)ನಲ್ಲಿ ಸಕ್ರೀಯವಾಗಿ ತೊಡಗಿಸಿಕೊಂಡ ಆಕೆ ಅದಾಗಲೇ ರಾಜ್ಯಾದ್ಯಂತ ಪ್ರಸಿದ್ಧರಾಗಿದ್ದರು. ಅನ್ಯಾಯವನ್ನು ಕಂಡರೆ ಆಕ್ರೋಶಿತರಾಗುವ ಆಕೆ ರಾಷ್ಟ್ರ ವಿರೋಧಿ ಚಟುವಟಿಕೆಗಳನ್ನು ಸಹಿಸುತ್ತಿರಲಿಲ್ಲ. ರಾಷ್ಟ್ರವಿರೋಧಿ ಶಕ್ತಿಗಳ ವಿರುದ್ಧ ಸದಾ ಗುಡುಗುವ ಆಕೆಯ ಭಾಷಣಕ್ಕೆ ಜನ ಹುಚ್ಚೆದ್ದು ಕುಣಿಯುತ್ತಿದ್ದರು. ಮದುವೆ ಪ್ರಸ್ತಾಪವನ್ನು ತಿರಸ್ಕರಿಸಿದ ಆಕೆ, ಅಧ್ಯಾತ್ಮ ಹಾಗೂ ರಾಷ್ಟ್ರಸೇವೆಯಲ್ಲಿ ತನ್ನನ್ನು ತೊಡಗಿಸಿಕೊಳ್ಳುವ ಸಂಕಲ್ಪ ಮಾಡಿ ಗುಜರಾತ್‌ನ ಸೂರತ್‌ನಲ್ಲಿ ಆಶ್ರಮವೊಂದನ್ನು ಪ್ರಾರಂಭಿಸಿದ್ದಳು.

ಭಾಷಣಕ್ಕಾಗಿ ಉತ್ತರ ಪ್ರದೇಶ, ಮಧ್ಯಪ್ರದೇಶ ಸೇರಿದಂತೆ ಎಲ್ಲೆಡೆ ತೆರಳಿ ಜಿಹಾದಿ ಶಕ್ತಿಗಳ ವಿರುದ್ಧ, ಗೋರಕ್ಷಣೆ, ಧರ್ಮರಕ್ಷಣೆಯ ಕುರಿತು ಸಾವಿರಾರು ಜನರೆದುರು ಸಾಧ್ವಿಯಾಡುತ್ತಿದ್ದ ಬೆಂಕಿಯ ಚೆಂಡಿನಂತಹ ಮಾತುಗಳನ್ನು ಕೇಳಿದ್ದ ರಾಷ್ಟ್ರವಿರೋಧಿ ಪಡೆಗಳು ಆಕೆಯನ್ನು ಹೇಗಾದರೂ ಹಣಿಯಲು ಹೊಂಚು ಹಾಕಿದ್ದವು.

2008ರ ಅಕ್ಟೋಬರ್ 7ರಂದು ಬೆಳ್ಳಂಬೆಳಗ್ಗೆ ಎಟಿಎಸ್ (ಭಯೋತ್ಪಾದಕ ನಿಗ್ರಹ ದಳ)ನ ಇ. ಸಾವಂತ್ ಸಾಧ್ವಿ ಪ್ರಜ್ಞಾಸಿಂಗ್ ಕರೆ ಮಾಡಿ ಸ್ಫೋಟ ಪ್ರಕರಣದಲ್ಲಿ ಶಾಮೀಲಾಗಿದ್ದ ಒಬ್ಬ ವ್ಯಕ್ತಿಯ ಬೈಕ್ ಕುರಿತು ಮಾಹಿತಿ ನೀಡಲು ತಾವು ಬರುವಂತೆ ತಿಳಿಸಿದ. ಅದರಂತೆ ಅ. 10ರಂದು ಸಾಧ್ವಿ ಪ್ರಜ್ಞಾಸಿಂಗ್ ಸೂರತ್‌ನ ನಿಗದಿಪಡಿಸಿದ ಸ್ಥಳಕ್ಕೆ ಧಾವಿಸಿದರು. ಅದಾಗಲೇ ಷಡ್ಯಂತ್ರ ರೂಪಿಸಿದ್ದ ಎಟಿಎಸ್‌ನಿಂದ ಸಾಧ್ವಿಗೆ ಅಲ್ಲಿ ಕಾದಿದ್ದು ಬಂಧನದ ಉಡುಗೊರೆ. ಅದೂ ಕಾನೂನುಬಾಹಿರವಾಗಿ. ಸಾಧ್ವಿಯನ್ನು ಬಂಧಿಸಿ, ಮುಂಬೈನ ಎಟಿಎಸ್ ಕಚೇರಿಗೆ ಕರೆತಂದು, 13 ದಿನಗಳ ಕಾಲ ಅಲ್ಲಿ ಕಾನೂನುಬಾಹಿರವಾಗಿ ಬಂಧಿಸಿಡಲಾಯಿತು. ಈ ದಿನಗಳಲ್ಲಿ ಪ್ರಜ್ಞಾಸಿಂಗ್‌ರಿಂದ ಮಾಲೆಗಾಂವ್ ಸ್ಫೋಟಕ್ಕೆ ಸಂಬಂಧಿಸಿ ತಪ್ಪೊಪ್ಪಿಕೊಳ್ಳುವಂತೆ ಹುನ್ನಾರ ನಡೆಸಿದ ಪೊಲೀಸರು ಆಕೆಗೆ ಮಾನಸಿಕವಾಗಿ ಶಾರೀರಿಕವಾಗಿ ಹಿಂಸೆ ನೀಡಿದರು. ಸಾಧ್ವಿ ಒಬ್ಬ ಮಹಿಳೆ ಎಂಬುದನ್ನೂ ಲೆಕ್ಕಿಸದೇ, ಆಕೆಯನ್ನು ಸುತ್ತುವರಿದ ಪುರುಷ ಪೊಲೀಸ್ ಅಧಿಕಾರಿಗಳು ಮನಸೋಇಚ್ಛೆ ಬೆಲ್ಟ್‌ಗಳಿಂದ ಹೊಡೆದರು. ನೆಲದ ಮೇಲೆ ಕೆಡವಿ ಅವಾಚ್ಯ ಶಬ್ದಗಳಿಂದ ನಿಂದಿಸಿದರು. ಅಶ್ಲೀಲ ಸಿಡಿಯೊಂದನ್ನು ಆಲಿಸುವಂತೆ ಬಲವಂತಪಡಿಸಿದರು. ಆದರೆ ಸಾಧ್ವಿ ಮಾತ್ರ ಪೊಲೀಸರ ಈ ನಿರಂತರ ಹಿಂಸಾಚಾರಕ್ಕೆ ಬಗ್ಗಲಿಲ್ಲ. ನಿರಂತರ ದೌರ್ಜನ್ಯದಿಂದ ಆಕೆಯ ಅಂಗಾಂಗ ಹಾಗೂ ಹೊಟ್ಟೆ ತೀವ್ರ ಗಾಸಿಗೊಂಡವು. ಉಸಿರಾಡುವುದಕ್ಕೂ ಕಷ್ಟವಾದ ಪರಿಸ್ಥಿತಿ ಎದುರಾಯಿತು. ಮುಂಬೈನ ಶುಶ್ರೂಷಾ ಎಂಬ ಖಾಸಗಿ ಆಸ್ಪತ್ರೆಗೆ ದಾಖಲಿಸಿದರು. ಅಲ್ಲಿಯೂ ಪ್ರಜ್ಞಾಹೀನಳಾದ ಆಕೆ ವೆಂಟಿಲೇಟರ್‌ನಲ್ಲಿಯೇ ದಿನಕಳೆಯುವಂತಾಯಿತು. ಕೊನೆಗೆ ವೆಂಟಿಲೇಟರ್‌ನಲ್ಲಿಯೇ ದೊಡ್ಡ ಆಸ್ಪತ್ರೆಗೆ ಸ್ಥಳಾಂತರಿಸದರು. ಆಕೆಯ ಮಿದುಳಿಗೆ ಹಾನಿಯಾಗಿದೆ ಎಂದು ಆಸ್ಪತ್ರೆಯ ವರದಿ ತಿಳಿಸಿದೆ. ಈ ಎಲ್ಲ ಹಿಂಸಾಚಾರ ನಡೆಸಿ ಪೊಲೀಸರು ಆಕೆಯ ಮೇಲೆ ಎಫ್‌ಐಆರ್ ದಾಖಲಿಸಿದ್ದು 13 ದಿನಗಳ ಬಳಿಕ, ಅನಂತರ ನ್ಯಾಯಾಲಯಕ್ಕೆ ಹಾಜರುಪಡಿಸಲಾಯಿತು.

ಪೊಲೀಸರ ಅಮಾನವೀಯತೆ ಎಷ್ಟು ಎಲ್ಲೆ ಮೀರಿತ್ತೆಂದರೆ ಸಾಧ್ವಿ ಪ್ರಜ್ಞಾಸಿಂಗ್ ಪ್ರಜ್ಞಾಹೀನ ಸ್ಥಿತಿಯಲ್ಲಿದ್ದಾಗಲೇ ಧರಿಸಿದ್ದ ಕಾವಿ ಉಡುಪನ್ನು ತೆಗೆದು ಸಲ್ವಾರ್ ತೊಡಿಸಲಾಯಿತು. ಪ್ರಜ್ಞೆ ಬಂದ ಬಳಿಕ ನ್ಯಾಯಾಲಯದ ಅನುಮತಿಯಿಲ್ಲದೆಯೇ ಕಾನೂನುಬಾಹಿರವಾಗಿ ನಾರ್ಕೊ, ಪಾಲಿಗ್ರಾಫ್ ಮತ್ತು ಬ್ರೈನ್ ಮ್ಯಾಪಿಂಗ್‌ನಂತಹ ವಿವಿಧ ಪರೀಕ್ಷೆಗಳಿಗೆ ಒಳಪಡಿಸಲಾಯಿತು. ಅಂತಹ ಪರೀಕ್ಷೆ ನಡೆಸಿದಾಗಲೂ ಎಟಿಎಸ್‌ಗೆ ಬೇಕಾಗಿದ್ದ ಯಾವುದೇ ಸಾಕ್ಷ್ಯಾಧಾರ, ಸುಳಿವುಗಳು ಸಿಗಲಿಲ್ಲ. ಅಸಲಿಗೆ ಸಾಧ್ವಿ ಪ್ರಜ್ಞಾಸಿಂಗ್ ಸ್ಫೋಟ ಪ್ರಕರಣದಲ್ಲಿ ಶಾಮೀಲಾಗಿದ್ದರೆ ತಾನೆ ಅಂತಹ ಸಾಕ್ಷ್ಯಾಧಾರ ಸಿಗುವುದು?

ಆದರೆ ಆಕೆಯನ್ನು ಹೇಗಾದರೂ ಮಾಡಿ ಮಾಲೆಗಾಂವ್ ಸ್ಫೋಟ ಪ್ರಕರಣದಲ್ಲಿ ಸಿಲುಕಿಸಲೇಬೇಕು ಎಂದು ಎಟಿಎಸ್ ಅಧಿಕಾರಿಗಳು ಪಣತೊಟ್ಟಿದ್ದರು. ಪಾಲಿಗ್ರಾಫ್, ಬ್ರೈನ್ ಮ್ಯಾಪಿಂಗ್ ಪರೀಕ್ಷೆಗಳ ನಂತರವೂ ಮತ್ತೆ ಮತ್ತೆ ಆಕೆಯನ್ನು ನಾನಾ ಬಗೆಯ ಶಾರೀರಿಕ, ಮಾನಸಿಕ ಹಿಂಸೆಗೆ ಒಳಪಡಿಸಿದರು. ಆಕೆಯ ಸಾತ್ವಿಕತೆಯನ್ನು ನಾಶಪಡಿಸಲು ಜೈಲಿನಲ್ಲಿ ಬೇಕೆಂದೇ ಆಹಾರದಲ್ಲಿ ಮೊಟ್ಟೆ ಬೆರೆಸಿ ಕೊಡಲಾಯಿತು. ಇವೆಲ್ಲದರ ಪರಿಣಾಮವಾಗಿ ಆಕೆ ಕ್ಯಾನ್ಸರ್‌ನಂತಹ ಗಂಭೀರ ಖಾಯಿಲೆಗೆ ತುತ್ತಾದರು. 2009ರಲ್ಲಿ ಸ್ತನ ಕ್ಯಾನ್ಸರ್ ಶಸ್ತ್ರಚಿಕಿತ್ಸೆಯೂ ನಡೆಯಿತು. ಆದರೂ ಚೇತರಿಸಿಕೊಳ್ಳದ ಆಕೆ ಇಂದಿಗೂ ಈ ನೋವಿನಲ್ಲಿಯೇ ದಿನ ಕಳೆಯುತ್ತಿದ್ದಾರೆ. ಈ ಎಲ್ಲ ಸಂಗತಿಗಳನ್ನು ಸ್ವತಃ ಸಾಧ್ವಿ ಪ್ರಜ್ಞಾಸಿಂಗ, 2013ರ ಜ.17 ರಂದು ಮುಂಬೈ ಹೈಕೋರ್ಟ್‌ನ ಗೌರವಾನ್ವಿತ ನ್ಯಾಯಮೂರ್ತಿಗಳಿಗೆ ತನ್ನ ಅನಾರೋಗ್ಯ ಸ್ಥಿತಿಯ ಕುರಿತು ಬರೆದ ಪತ್ರದಲ್ಲಿ ವಿವರಿಸಿದ್ದಾರೆ.

'ಹಿಂದೂ ಭಯೋತ್ಪಾದನೆ', 'ಕೇಸರಿ ಭಯೋತ್ಪಾದನೆ' ಎಂಬ ಹೊಸ ನಾಮಕರಣ ಮಾಡಿ, ಪಾಕಿಸ್ಥಾನಕ್ಕೂ ಭಾರತದ ವಿರುದ್ಧ ಮಾತನಾಡುವ ಅವಕಾಶ ಕಲ್ಪಿಸಿಕೊಟ್ಟರು. ಅಜ್ಮೀರ್, ಮಾಲೆಂಗಾವ್, ಹೈದರಾಬಾದ್ ಘಟನೆಗಳಲ್ಲಿ ಮುಸ್ಲಿಂರು ಸಾವನ್ನಪ್ಪಿದ್ದಾರೆ ಎಂಬ ಒಂದೇ ಕಾರಣದಿಂದ ಆರೋಪವನ್ನು ಆರೆಸ್ಸೆಸ್‌ನ ತಲೆಗೆ ಕಟ್ಟುವ ವ್ಯವಸ್ಥಿತ ಷಡ್ಯಂತ್ರ ನಡೆಯಿತು. ಆದರೆ ಘಟನೆ ನಡೆದು 7 ವರ್ಷ7 ತಿಂಗಳು ಕಳೆದರೂ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಇಂದಿಗೂ ಆರೋಪ ಸಾಬೀತುಪಡಿಸಲು ಸಾಧ್ಯವಾಗಿಲ್ಲ. ಕಾರಣ ಬಹಳ ಸ್ಪಷ್ಟ ಇದೊಂದು ರಾಜಕೀಯ ಪ್ರೇರಿತ ಆರೋಪ.

1ನೇ ಪುಟದಿಂದ...

ಪದೇ ಪದೇ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ವಿವಾದಕ್ಕೆ ಎಳೆದು ಹೆಸರು ಕೆಡಿಸಲು ಸರ್ವರೀತಿಯಿಂದ ಪ್ರಯತ್ನಿಸಲಾಯಿತು. ಎಷ್ಟರಮಟ್ಟಿಗೆ ಎಂದರೆ ಕಾಂಗ್ರೆಸ್ ಧುರೀಣ ದಿಗ್ವಿಜಯ ಸಿಂಗ್ 26/11ರ ಮುಂಬೈ ಉಗ್ರ ದಾಳಿಗೂ ಆರೆಸ್ಸೆಸ್ ಹೆಸರನ್ನು ಥಳುಕು ಹಾಕುವ ಪ್ರಯತ್ನ ಮಾಡಿದ್ದರು.



ಆದರೆ ಎಂಟು ವರ್ಷಗಳ ನಂತರ ವಿಷಯ ಸ್ಪಷ್ಟವಾಗಿದೆ ಮಾಲೆಗಾಂವ್ ಪ್ರಕರಣದಲ್ಲಿ ಆರೋಪ ಹೊರಿಸಿ ಜೈಲಿಗೆ ದೂಡಲ್ಪಟ್ಟ ಸಾಧ್ವಿ ಪ್ರಜ್ಞಾಸಿಂಗ್ ಠಾಕೂರ್ ಮತ್ತಿತರ ಮೇಲೆ ಯಾವುದೇ ಸಾಕ್ಷಿ ಆಧಾರಗಳಿಲ್ಲ ಎಂದು ರಾಷ್ಟ್ರೀಯ ತನಿಖಾ ದಳ ತನ್ನ ವರದಿಯನ್ನು ನ್ಯಾಯಾಲಕ್ಕೆ ಸಲ್ಲಿಸಿದೆ. ಇದರೊಂದಿಗೆ Maharashtra Control of Organized Crime Act (MCOCA) ದುರ್ಬಳಕೆಯಿಂದ ಮಹಾರಾಷ್ಟ್ರ ಭಯೋತ್ಪಾದಕ ನಿಗ್ರಹ ದಳ ಸುಳ್ಳು ಪ್ರಕರಣವನ್ನು ದಾಖಲಿಸಿತ್ತು ಎನ್ನುವುದು ಸ್ಪಷ್ಟಗೊಂಡಿದೆ. ಅಂದಿನ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಸಂಘಪರಿವಾರವನ್ನು ತುಳಿಯುವ ಸಲುವಾಗಿ ಭಯೋತ್ಪಾದನೆಯನ್ನು ರಾಜಕೀಯ ಲಾಭಕ್ಕೆ ಬಳಸಿಕೊಂಡಿದ್ದು ಇದೀಗ ಬಯಲಾಗಿದೆ.

ಅಷ್ಟಕ್ಕೂ ಭಾರತೀಯ ಇತಿಹಾಸದಲ್ಲಿ ಹಿಂದು ಎಂದೂ ಭಯೋತ್ಪಾದಕನಾಗಿಲ್ಲ; ಮುಂದೆಯೂ ಆಗಲಾರ. ಹಿಂದು ಮಾನಸಿಕತೆಯೇ ಅಹಿಂಸಾತ್ಮಕವಾದುದ್ದು; ಸರ್ವರನ್ನೂ ಒಳಗೊಳ್ಳುವಂಥದ್ದು. ಈ ಕಾರಣದಿಂದಲೇ ತಾನೇ ಭಾರತದ ಇತಿಹಾಸದಲ್ಲಿ ಜಗತ್ತಿನ ಯಾವುದೇ ದೇಶದ ಮೇಲೆ ದಂಡೆತ್ತಿ ಹೋದ ಒಂದೇ ಒಂದು ಉದಾಹರಣೆ ಸಿಗದಿರುವುದು. ಮಹಾಘೋರ ಯುದ್ಧ ನಡೆಯುವ ಮೊದಲೂ ಶ್ರೀಕೃಷ್ಣ ಸಂಧಾನಕ್ಕೆ ತೆರಳಿದ್ದಂತಹ ಶ್ರೇಷ್ಠ ಸಂಸ್ಕೃತಿಯ ವಾರಸುದಾರರು ಹಿಂದುಗಳು.

ಇಂದು ಇಸ್ಲಾಂ ಮೂಲಭೂತವಾದ ಮತ್ತು ಎಡಪಂಥೀಯ ವಿಚಾರಗಳಿಂದ ಪ್ರೇರಿತವಾದ ಭಯೋತ್ಪಾದಕ ಸಂಘಟನೆಗಳು ವಿಶ್ವವನ್ನು ವಿನಾಶದ ಅಂಚಿಗೆ ತಲುಪಿಸುತ್ತಿವೆ. ಅನೇಕ ರಾಷ್ಟ್ರಗಳು ಮತ್ತು ಕೆಲವು ದೇಶದ ನಾಯಕರುಗಳು ತಮ್ಮ ರಾಜಕೀಯ ಸ್ವಾರ್ಥಕ್ಕಾಗಿ ಉಗ್ರ ಸಂಘಟನೆಗಳ ಮುಖಾಂತರ ಛಾಯಾ ಸಮರವನ್ನು ನಡೆಸುತ್ತಿರುವುದು ಕೂಡ ತಿಳಿದಿರುವ ವಿಷಯವೇ ಆಗಿದೆ. ಮಧ್ಯಪ್ರಾಚ್ಯ ಪ್ರದೇಶದ ಅನೇಕ ದೇಶಗಳು ಉಗ್ರ ಸಂಘಟನೆಗಳಿಗೆ ಆರ್ಥಿಕ ನೆರವನ್ನು ನೀಡುತ್ತಿವೆ. ಪಾಕಿಸ್ತಾನದಂತಹ ದೇಶಗಳು ಇಂತಹ ಭಯೋತ್ಪಾದಕ ಸಂಘಟನೆಗಳ ಬೆನ್ನಿಗೆ ನಿಂತಿವೆ. ಆದರೂ ವಿಶ್ವಸಂಸ್ಥೆಯೂ ಸೇರಿದಂತೆ ವಿಶ್ವದ ವೇದಿಕೆಯಲ್ಲಿ ಭಯೋತ್ಪಾದನೆ ಬಗ್ಗೆ ಒಂದು ಸ್ಪಷ್ಟವಾದ ವ್ಯಾಖ್ಯಾನ ಇಲ್ಲದೇ ಇರುವುದು ದುರದೃಷ್ಟಕರವಾಗಿದೆ. ಹೀಗಿರುವಾಗ ಭಾರತದ ರಾಜಕೀಯ ಪಕ್ಷಗಳು, ಶೈಕ್ಷಣಿಕ ಹಾಗೂ ಮಾಧ್ಯಮಗಳ ಬುದ್ಧಿಜೀವಿ ವರ್ಗ ಭಯೋತ್ಪಾದನೆಯ ವಿಷಯದಲ್ಲಿ ಸ್ವಾರ್ಥಲಾಭವನ್ನು ನೋಡದೇ ದೇಶಹಿತವನ್ನು ಗಂಭೀರವಾಗಿ ಪರಿಗಣಿಸುವ ಅಗತ್ಯವಿದೆ. ಆದ್ದರಿಂದ ಹಿಂದುತ್ವ ಉಗ್ರವಾದ, ಕೇಸರೀ ಭಯೋತ್ಪಾದನೆ ಮುಂತಾದ ಹೊಸ ಹೊಸ ನುಡಿಗಟ್ಟುಗಳನ್ನು ಹುಟ್ಟುಹಾಕಿ ಹಿಂದುವಿನ ಹಾಗೂ ದೇಶದ ಮಾನ ಕಳೆಯುವ ದುರ್ಬುದ್ಧಿ ತೊಲಗಬೇಕು.

# ನಮ್ಮ ನಡುವಿನ ಆದರ್ಶ ವ್ಯಕ್ತಿಗಳು ಇವರು ಸೆಲೆಬ್ರಿಟಿಗಳಲ್ಲ; ಸಾಧಕರು



ಸಮಾಜಕ್ಕೆ ಒಳ್ಳೆಯದನ್ನು ಮಾಡುವ ಅತೀವ ತುಡಿತದಿಂದ ವಿಮಲಾ ಕೌಲ್ ಮತ್ತು ಅವರ ಪತಿ ಪ್ರಾಧ್ಯಾಪಕ ವೃತ್ತಿಯ ನಿವೃತ್ತಿಯ ನಂತರ ದೆಹಲಿಯಿಂದ ಮದನ್ ಖಡರ್ಪುರ್ ಎಂಬ ಹಳ್ಳಿಯಲ್ಲಿ ನೆಲೆಸಿದರು. ಪ್ರಾರಂಭದಲ್ಲಿ ಇವರ ಆಶಯಕ್ಕೆ ಗ್ರಾಮಸ್ಥರು ಸರಿಯಾಗಿ ಸ್ಪಂದಿಸಲಿಲ್ಲ. ಛಲ ಬಿಡದ ದಂಪತಿಗಳು 6 ತಿಂಗಳ ಕಾಲ ಪ್ರಯತ್ನಿಸಿ, ಊರಹಿರಿಯರ ಅನುಮತಿ ಪಡೆದು ಹೆಣ್ಣುಮಕ್ಕಳಿಗೆ ಹೊಲಿಗೆ ತರಬೇತಿ ಶಾಲೆಯೊಂದನ್ನು ಪ್ರಾರಂಭಿಸಿದರು. ಹೊಲಿಗೆ ಕಲಿಯಲು ಬರುತ್ತಿದ್ದ ಯುವತಿಯೊಬ್ಬಳನ್ನು ಆರಿಸಿ 5 ಜನ ಬಡಮಕ್ಕಳ ಶಾಲೆಯನ್ನು ಪ್ರಾರಂಭಿಸಿದರು. ಎರಡು ವರ್ಷದಲ್ಲಿ ಆಕೆಗೆ ಮದುವೆಯಾದುದರಿಂದ ಶಾಲೆಯ ಬಾಗಿಲು ಮುಚ್ಚಿತು. ತಮ್ಮ ಮನೆಯ ಪಕ್ಕದ ಉದ್ಯಾನದಲ್ಲಿ ಶಾಲೆ ಪುನರಾರಂಭಿಸಿದರು, ನಿರ್ಗತಿಕ ಮಕ್ಕಳ ಪಾಠ ಗದ್ದಲವೆಂದು ನೆರೆಹೊರೆಯರು ಆಕ್ಷೇಪಿಸಿದ್ದರಿಂದ ಮತ್ತೆ ಶಾಲೆಯನ್ನು ಸ್ಥಳಾಂತರಿಸಿ ಮುಂದುವರಿಸಿದರು. ಹೀಗೆ ವಿವಿಧ ಕಾರಣಗಳಿಂದ ಶಾಲೆ ಉದ್ಯಾನದಿಂದ ಉದ್ಯಾನಗಳಿಗೆ ವರ್ಗವಾಗುತ್ತಿತ್ತು. ಆದರೆ ಸ್ವಂತ ಹಣ ವ್ಯಯಿಸಿ ಶಾಲೆಯಂತಹ ಸೇವಾ ಚಟುವಟಿಕೆ ನಡೆಸುತ್ತಿದ್ದ ಕೌಲ್ ದಂಪತಿಗಳು ಮಾತ್ರ ತಮ್ಮ ಕಾರ್ಯದಿಂದ ದೂರಸರಿಯದೇ ಮುಂದುವರಿಸಿದ್ದಾರೆ. 10 ವರ್ಷಗಳಿಂದ ದೆಹಲಿ ನಗರ ಪಾಲಿಕೆಯ ವ್ಯಾಪ್ತಿಯ ಸಾರ್ವಜನಿಕ ಉದ್ಯಾನವೊಂದರಲ್ಲಿ ಬಯಲುಶಾಲೆ ಪ್ರಾರಂಭಿಸಿ ಬಡಮಕ್ಕಳ ಉಚಿತ ಶಿಕ್ಷಣ ನೀಡುತ್ತಿದ್ದಾರೆ. ಇದೀಗ ಕೆಲ ಸ್ವಯಂಸೇವಾ ಸಂಸ್ಥೆಗಳು 81ರ ಹರೆಯದಲ್ಲಿರುವ ವಿಮಲಾ ಕೌಲ್‌ರೊಂದಿಗೆ ಕೈಜೋಡಿಸಿದ್ದು, ಶಾಲೆಗೆ ಈಗ ಕಟ್ಟಡ, ಗ್ರಂಥಾಲಯ, ಕಂಪ್ಯೂಟರ್‌ಗಳು ಲಭ್ಯವಾಗಿವೆ. ಬಡಮಕ್ಕಳಿಗೆ ಪಾಠ ಮಾತ್ರವಲ್ಲದೆ, ಆರೋಗ್ಯ, ನೃತ್ಯ, ಉದ್ಯೋಗ ತರಬೇತಿಯ ಶಿಬಿರಗಳನ್ನೂ ಅವರು ನೀಡುತ್ತಿದ್ದಾರೆ.



ಕೇರಳದ ಪುದಕ್ಕೊಟ್ಟೈಯ ಎಸ್. ಮೂರ್ತಿಯವರದ್ದು ತಮ್ಮ ಸಹೋದರರೊಂದಿಗಿನ ಅವಿಭಜಿತ ಕುಟುಂಬ. ಸಾವಯವ ಕೃಷಿಯನ್ನು ಅವಲಂಬಿಸಿರುವ ಮೂರ್ತಿಯವರ ನೆರವಿಗೆ 5 ದೇಸಿ ತಳಿಯ ಹಸುಗಳಿವೆ. ವಿಶೇಷತೆ ಇರುವುದೇ ಇಲ್ಲಿ. ಕೃಷಿ ಅಥವಾ ಹಸುವಿನ ಉತ್ಪನ್ನಗಳ್ಯಾವದು ಮಾರಟಕ್ಕಿಲ್ಲ ಆದರೆ ಅದರ ಉಪಯೋಗವಾಗುವುದು ಮೂರ್ತಿಯವರೇ ನಡೆಸುವ ಕಾರ್ತಿಕ್ ಉಪಾಹಾರ ದರ್ಶಿನಿಯಲ್ಲಿ. ತನ್ನ ಗ್ರಾಹಕರ ಆರೋಗ್ಯದ ಕಾಳಜಿ ತೆಗೆದುಕೊಳ್ಳುವ ಉದ್ಯೇಶ್ಯದಿಂದ ತನ್ನ ವ್ಯವಹಾರವನ್ನೇ ಸೇವೆಯಾಗಿಸಿದ್ದಾರೆ. ತನ್ನ ಸಂಬಂಧಿಕರೋರ್ವರಿಗೆ ಆಪತ್ಕಾಲದಲ್ಲಿ ರಕ್ತ ಸಿಗದೇ ಆದ ಕಷ್ಟವನ್ನು ಅನುಭವಿಸಿ ತಿಳಿದಿರುವ ಮೂರ್ತಿ ಸ್ವತ: ರಕ್ತದಾನವನ್ನು ಪ್ರೋತ್ಸಾಹಿಸುವದಕ್ಕಾಗಿ ಶಿವಕಾಮಿ ಅಮ್ಮಾಳ್ ಹೆಸರಿನ ರಕ್ತದಾನ ಸಂಸ್ಥೆಯೊಂದನ್ನು 2005 ರಿಂದ ನಡೆಸುತ್ತಿದ್ದಾರೆ. ಅವರ ಸಹೋದರರೆಲ್ಲ ಮೂರ್ತಿಯವರ ಈ ಕೆಲಸದಲ್ಲಿ ಸಹಾಯ ಮಾಡುತ್ತಾರೆ. "ವರ್ಷವೊಂದರಲ್ಲಿ ನಾವು 6 ರಕ್ತದಾನ ಶಿಬಿರಗಳನ್ನು ನಡೆಸುತ್ತಿದ್ದು, ಸಂಸ್ಥೆಯಲ್ಲಿ 15 ಸದಸ್ಯರು ಹಾಗೂ 25 ಜನ ಸ್ವಯಂಪ್ರೇರಿತ ದಾನಿಗಳೂ ಸೇರಿದ್ದಾರೆ. ಇವತ್ತಿನವರೆಗೆ 1600 ಯೂನಿಟ್ ಗಳಷ್ಟು ರಕ್ತವನ್ನು ನಮ್ಮ ಪರೋಪಕಾರಿ ದಾನಿಗಳಿಂದ ಸಂಗ್ರಹಿಸಿದ್ದು ತುರ್ತು ಸಮಯದಲ್ಲಿ ಇದರ ಉಪಯೋಗ ಪಡೆದವರ ಹೃತ್ಪೂರ್ವಕ ಧನ್ಯವಾದಗಳೇ ನಮಗೆ ಇಂಥ ಜೀವರಕ್ಷಕ ಸೇವೆಯನ್ನು ಮುಂದುವರೆಸುವಂತೆ ಪ್ರೇರೆಪಿಸುತ್ತವೆ" ಎನ್ನುತ್ತಾರೆ ಮೂರ್ತಿ.



ಪರರ ಮನೆಯ ಬಾವಿಯಿಂದ ನೀರು ತರಲು ಹೋದ ಪತ್ನಿಗೆ ಅವಮಾನ ಮಾಡಿದರೆಂದು ತಾಂಜೆ ಒಬ್ಬಂಟಿಯಾಗಿ ಬಾವಿ ತೋಡಿ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿದ್ದಾನೆ. ತಾಂಜೆ, ಮಹಾರಾಷ್ಟ್ರದ ವಾಶಿಂ ಜಿಲ್ಲೆಯ ಕಲಂಬೇಶ್ವರ್ ಗ್ರಾಮದ ದಲಿತ. ದಿನಗೂಲಿ ಕೆಲಸ ಮಾಡಿ ಜೀವನ ನಡೆಸುತ್ತಿದ್ದ. ದಿನದಲ್ಲಿ 6 ಗಂಟೆಗಳ ಬಾವಿ ತೋಡುತ್ತಿದ್ದ ಈತನಿಗೆ 40 ದಿನಗಳ ನಂತರ ನೀರು ಸಿಕ್ಕಿದೆ.

**ಪತ್ನಿಗೆ ಅವಮಾನ; ಪತಿ ಒಬ್ಬಂಟಿಯಾಗಿ ಬಾವಿ ತೋಡಿದರು**

ತೀವ್ರ ಬರಗಾಲದಿಂದ ಬಾವಿ ಬತ್ತಿಹೊದುದರಿಂದ ಗ್ರಾಮದಲ್ಲಿನ ದಲಿತರೆಲ್ಲರೂ ಬೇರೊಂದು ಮನೆಯ ಬಾವಿಯಿಂದ ನೀರು ತರಬೇಕಾಯಿತು. ಹೀಗೆಯೇ ಒಂದು ದಿನ ತಾಂಜೆಯ ಪತ್ನಿ ಸಂಗೀತ ನೀರು ತರಲು ಹೋದಾಗ ಆ ಮನೆಯವರು ಈಕೆಗೆ ನೀರು ನೀಡಲು ನಿರಾಕರಿಸಿ ಅವಮಾನ ಮಾಡಿದರು. ಇದನ್ನು ಸಂಗೀತ ಗಂಡನೊಂದಿಗೆ ಹಂಚಿಕೊಂಡರು. ಆಗಲೇ ತಾಂಜೆ, ಇನ್ನು ಮುಂದೆ ಯಾರ ಬಳಿಯೂ ನೀರು ಕೇಳಲು ಹೋಗಬಾರದು ಎಂದು ತೀರ್ಮಾನಿದರು. ಹತ್ತಿರದ ಪೇಟೆ ಮಾಲೇಂಗಾವ್‌ಗೆ ಹೋಗಿ ಬಾವಿ ತೋಡಲು ಬೇಕಾದ ವಸ್ತುಗಳನ್ನೆಲ್ಲಾ ಖರೀದಿಸಿ ಬಾವಿ ತೋಡಿ ಯಶಸ್ವಿಯಾಗಿದ್ದಾರೆ. ಮೊದ ಮೊದಲಿಗೆ ತಾಂಜೆಗೆ ಹುಚ್ಚು ಎಂದು ಜನರು ನಕ್ಕಿದ್ದರು. ಆತನ ಪತ್ನಿ ಕೂಡಾ ಸಹಾಯಕ್ಕೆ ಬರಲಿಲ್ಲ. ಆದರೆ 40 ದಿನಗಳ ನಂತರ ಬಾವಿಯಲ್ಲಿ ನೀರು ಸಿಕ್ಕಿದ್ದು, ಇದೀಗ ಇಡೀ ಗ್ರಾಮಕ್ಕೆ ಹೀರೋ ಆಗಿದ್ದಾರೆ.

# ಸಕ್ಕರೆ ನಾಡಿನಲ್ಲೊಬ್ಬ ಮಾದರಿ ಕೃಷಿಕ




ಸಕ್ಕರೆ ನಾಡಿನಲ್ಲೊಬ್ಬ ಮಾದರಿ ಕೃಷಿಕಬೇಸಾಯದಿಂದ ಲಾಭವಿಲ್ಲ, ನಷ್ಟವೇ ಎಲ್ಲ ಎನ್ನುವ ಜನ ಎಲ್ಲೆಡೆ ಇರುವ ನಡುವೆ ಕೃಷಿಯಿಂದಲೇ ನೆಮ್ಮದಿಯ ಬದುಕು ಸಾಧ್ಯ ಎಂದು ಸಾಧಿಸಿ ತೋರಿಸುವ ರೈತರೂ ಇದ್ದಾರೆ. ಅಂಥವರ ಸಾಲಿಗೆ ಸೇರುತ್ತಾರೆ, ಮದ್ದೂರು ತಾಲೂಕಿನ ಸೊಳ್ಳೇಪುರ ಗ್ರಾಮದ ಯುವ ರೈತ ಚಂದ್ರಶೇಖರ್.

ಕಳೆದ 8 ವರ್ಷಗಳಿಂದ 3 ಎಕರೆ ಜಮೀನಿನಲ್ಲಿ ರಾಸಾಯನಿಕ ಬಳಸದೇ ಕೇವಲ ಗೋ ತ್ಯಾಜ್ಯ ಬಳಸಿ ಬೇಸಾಯ ಮಾಡುತ್ತಿರುವ ಚಂದ್ರಶೇಖರ್, ಭತ್ತ, ರಾಗಿ, ತೋಟಗಾರಿಕೆ ಬೆಳೆಗಳನ್ನು ಬೆಳೆಯುತ್ತ ನೆಮ್ಮದಿಯ ಬದುಕು ಕಟ್ಟಿಕೊಂಡಿದ್ದಾರೆ. ಸುಭಾಷ್ ಪಾಳೇಕರ್ ಅವರಿಂದ ಪ್ರೇರೇಪಿತರಾಗಿ 3 ನಾಟಿ ಹಸುಗಳನ್ನು ಕಟ್ಟಿ ಬೇಸಾಯ ಆರಂಭಿಸಿದ ಇವರನ್ನು ಕಂಡು ನೆರೆಹೊರೆ ರೈತರು ಲೇವಡಿ ಮಾಡಿದ್ದರು. ಕಾರಣ, ಆರಂಭದಲ್ಲಿ ಇವರು ಪಡೆದ ಕಡಿಮೆ ಇಳುವರಿ. ಆದರೆ ಅಂತಹ ಕುಹಕಕ್ಕೆ ಇವರು ಕುಗ್ಗಲಿಲ್ಲ. ನಷ್ಟವಾದರೂ ಸರಿ ಎಂಬ ಛಲದೊಂದಿಗೆ ರಾಸಾಯನಿಕ ಮುಟ್ಟಲಿಲ್ಲ. ವರುಷ ಕಳೆದಂತೆ ಇಳುವರಿ ಹೆಚ್ಚುತ್ತಾ ಸಾಗಿತು. ಮಿಶ್ರ ಬೆಳೆ ಪದ್ಧತಿ ಅನುಸರಿಸಿದ ಇವರು ಬಂಡವಾಳವೇ ಇಲ್ಲದೆ ಬಂಗಾರದ ಬೆಳೆ ಬೆಳೆಯಲಾರಂಭಿಸಿದರು. ಹಿಂದೆ ಲೇವಡಿ ಮಾಡಿದ್ದವರು ಇವರ ಪ್ರಗತಿಯನ್ನು ಕಂಡು ತಲೆ ತಗ್ಗಿಸುವಂತಾಯಿತು.

ನಮ್ಮ ಪೂರ್ವಿಕರು ಬೆಳೆಯುತ್ತಿದ್ದ ತಳಿಗಳಾದ ರತ್ನಚೂಡಿ, ರಾಜಭೋತ, ರಾಜಮುಡಿ ಹಾಗೂ ರತ್ನಸಾಗರ ಮೊದಲಾದ ಅಪ್ಪಟ ದೇಸೀ ತಳಿಗಳನ್ನು ನಾಟಿ ಮಾಡಿ ಎಕರೆಗೆ 30 ಕ್ವಿಂಟಾಲ್ ಭತ್ತ ಬೆಳೆದಿದ್ದಾರೆ. ಕಬ್ಬು, ರಾಗಿ, ಬಾಳೆಯೊಂದಿಗೆ ಅಂತರ ಬೆಳೆಗಳನ್ನು ಬೆಳೆಯುವ ಇವರು ನೈಸರ್ಗಿಕ ಕೃಷಿ ಮಾಡಲು ಆಸಕ್ತಿ ಇರುವ ರೈತರಿಗೆ ಉಚಿತವಾಗಿ ಭತ್ತ ನೀಡುವುದರ ಜತೆಗೆ ಅಗತ್ಯ ಮಾರ್ಗದರ್ಶನ, ಮಾಹಿತಿಯನ್ನೂ ನೀಡುತ್ತಾರೆ. ಮಾತ್ರವಲ್ಲ, ಮನೆಯಂಗಳದಲ್ಲಿ ತೋಟ ಮಾಡಿಕೊಂಡು ಮನೆಗೆ ಅಗತ್ಯವಿರುವ ಎಲ್ಲ ತರಕಾರಿಗಳನ್ನು ಬೆಳೆದುಕೊಳ್ಳುತ್ತಾರೆ.

ರಾಸಾಯನಿಕ ಮುಕ್ತವಾಗಿ ಬೆಳೆದ ಬೆಳೆಗಳನ್ನು ಮಾರಾಟ ಮಾಡಲು ಇವರು ಯಾವ ಮಾರುಕಟ್ಟೆಗೂ ಹೋಗುವುದಿಲ್ಲ. ಭತ್ತ, ರಾಗಿಯನ್ನು ಮನೆಯಲ್ಲೇ ಸಂಗ್ರಹಿಸಿಟ್ಟುಕೊಂಡು ತಮ್ಮಲ್ಲಿಗೆ ಬರುವ ಗ್ರಾಹಕರಿಗೆ ಮಾರಾಟ ಮಾಡುತ್ತಾರೆ. ಗ್ರಾಹಕರಿಗೆ ನೇರವಾಗಿ ಹಾಗೂ ನ್ಯಾಯಯುತ ಬೆಲೆಯಲ್ಲಿ ಮಾರುವುದರಿಂದ ಇಬ್ಬರಿಗೂ ಮೋಸವಾಗದು ಎನ್ನುತ್ತಾರೆ ಚಂದ್ರಶೇಖರ್.



ಸಾಮಾಜಿಕ ಕಾರ್ಯಗಳಲ್ಲಿ ಭಾಗಿ: ಚಂದ್ರಶೇಖರ್ ಕೃಷಿ ಮಾಡುವುದರ ಜತೆಗೆ ಅಂತರ್ಜಲ ವೃದ್ಧಿ, ನಾಲೆಗಳ ಹೂಳು ತೆಗೆಸುವಲ್ಲಿ ಮುಂದಾಳತ್ವ ಮೊದಲಾದ ಕೃಷಿ ಸಂಬಂಧಿ ಚಟುವಟಿಕೆಗಳಲ್ಲಿ ಸದಾ ಮುಂದಿರುತ್ತಾರೆ. ಇವರ ಸಾಧನೆಗೆ ತಾಲೂಕು ಆಡಳಿತ ಗಣರಾಜ್ಯೋತ್ಸವ ಪ್ರಶಸ್ತಿ ನೀಡಿದೆ. ಜತೆಗೆ ವಿವಿಧ ಸಂಘ ಸಂಸ್ಥೆಗಳಿಂದ ಸನ್ಮಾನ, ಪುರಸ್ಕಾರಗಳೂ ದೊರೆತಿವೆ. ಚಂದ್ರಶೇಖರ್ ದೂ. ಸಂ.: 9844152845

ಸಂಪಾದಕೀಯ ಸಹಕಾರ ಶ್ರೀಹರ್ಷ ಪೆರ್ಲ, ಸತ್ಯನಾರಾಯಣ ಶಾನುಬೋಗ್, ಪ್ರವೀಣ್ ಪಟವರ್ಧನ್, ಶೈಲೇಶ್ ಕುಲಕರ್ಣಿ, ಪ್ರತಾಪ ಕೊಡಂಚ, ಶಶಾಂಕ್ ಹತ್ವಾರ್, ರಾಧಾಕೃಷ್ಣ ಹೊಳ್ಳ, ಮೊಳಹಳ್ಳಿ ಅನಿಲ್‌ಕುಮಾರ್



ನಿಜವಾದ ಸಂತೃಪ್ತಿ ಹಾಗೂ ಜೀವನಕ್ಕೊಂದು ಸಾರ್ಥಕತೆ ಎಲ್ಲಿ ಸಿಗುತ್ತದೆ ಎಂಬುದು ಅರಿವಾದಾಗ ಮನುಷ್ಯನ ಜೀವನವೇ ಬದಲಾಗುತ್ತದೆ ಎಂಬುದಕ್ಕೆ ಹಲವು ಉದಾಹರಣೆಗಳನ್ನು ಇಂದು ಕಾಣಬಹುದು. ಅಂತಹವರಲ್ಲಿ ಅಲೋಕ್ ಸಾಗರ್ ಒಬ್ಬರು. ಐಐಟಿ ದೆಹಲಿಯಲ್ಲಿ ಪದವಿ ಪಡೆದು, ಅಮೆರಿಕದಲ್ಲಿ ಉನ್ನತ ವ್ಯಾಸಂಗ ಮಾಡಿ, ಪ್ರತಿಷ್ಠಿತ ವಿಶ್ವವಿದ್ಯಾಲಯದಲ್ಲಿ ಪ್ರೊಫೆಸ್ಸರ್‌ರಾಗಿ ಕೆಲಸ ಮಾಡಿರುವ ಅಲೋಕ್ ಸಾಗರ್ ಕಳೆದ ನಲವತ್ತು ವರ್ಷಗಳಿಂದ ಆದಿವಾಸಿಗಳ ಕಲ್ಯಾಣದಲ್ಲಿ ತೊಡಗಿದ್ದಾರೆ. ಪ್ರಸ್ತುತ ದೇಶದ ಆರ್.ಬಿ.ಐ ಗವರ್ನರ್ ರಘುರಾಮ್ ರಾಜನ್‌ರವರಿಗೂ ಐ.ಐ.ಟಿಯಲ್ಲಿ ಪಾಠ ಮಾಡಿರುವ ಅಲೋಕ್ ಸಾಗರ್ ಈಗ ನಿಜ ದೇಶಸೇವೆಯಲ್ಲಿ ನಿರತರಾಗಿದ್ದಾರೆ. ಮಧ್ಯಪ್ರದೇಶದ ಬೇತುಳ್ ಗ್ರಾಮದಲ್ಲಿ ಈವರೆಗೆ 50,000 ಮರಗಳನ್ನು ಒಬ್ಬಂಟಿಯಾಗಿ ನೆಟ್ಟಿದ್ದಾರೆ. ಶ್ರಮಿಕ ಆದಿವಾಸಿ ಸಂಘಟನೆಯನ್ನು ಕಟ್ಟಿಕೊಂಡು ಸುತ್ತಲಿನ ಆದಿವಾಸಿ ಜನರ ಕಷ್ಟಗಳನ್ನು ಆಲಿಸಿ ಅವರ ಶ್ರೇಯಸ್ಸಿಗಾಗಿ ಶ್ರಮಿಸುತ್ತಿದ್ದಾರೆ. ದೇಶದಲ್ಲಿ ಉನ್ನತ ವ್ಯಾಸಂಗ ಎಂದರೆ ಹೆಚ್ಚು ಗಳಿಸುವುದು, ಹಣ ಮಾಡುವುದು ಎಂದು ನಂಬುವವರ ಸಂಖ್ಯೆ ಹೆಚ್ಚುತ್ತಿರುವಾಗ ಅಲೋಕ್ ಸಾಗರರಂಥವರ ಜೀವನ ಕ್ರಮ ಅನುಕರಣೀಯ. ಅವರ ಜೀವನ ಹಲವರಿಗೆ ಮಾದರಿ.

ಗುಜರಾತ್‌ನಲ್ಲಿ ಭೀಕರ ಕೋಮುಗಲಭೆಗೆ ಕಾರಣವಾಗಿದ್ದ 2002ರ ಗೋಧ್ರಾ ನರಮೇಧ ಪ್ರಕರಣದಲ್ಲಿ ರೈಲಿಗೆ ಬೆಂಕಿ ಇಟ್ಟ ಪ್ರಮುಖ ಆರೋಪಿ ಫಾರೂಖ್ ಭಾನಾ 14 ವರ್ಷಗಳ ನಂತರ ಪೊಲೀಸರ ಬಲೆಗೆ ಬಿದ್ದಿದ್ದಾನೆ. ಅಯೋಧ್ಯೆಯಿಂದ ಕರಸೇವಕರು ವಾಪಸಾಗುತ್ತಿದ್ದ ಸಬರಮತಿ ರೈಲಿಗೆ ಬೆಂಕಿ ಇಟ್ಟು 59 ಪ್ರಯಾಣಿಕರನ್ನು ಬಲಿಪಡೆದುಕೊಂಡಿದ್ದ ಈ ದುಷ್ಕೃತ್ಯಕ್ಕೆ ಭಾನಾನೇ ಪ್ರಮುಖ ಸಂಚುಕೋರ. ಗೋಧ್ರಾ ರೈಲು ದುರಂತ ಹಾಗೂ ನಂತರ ಗುಜರಾತ್‌ನ ಹಲವೆಡೆ ನಡೆದ ಕೋಮು ದಂಗೆಗೆ ಸಾವಿರಕ್ಕೂ ಹೆಚ್ಚು ಜನರು ಬಲಿಯಾಗಿದ್ದರು. ಕಳೆದ ವರ್ಷ ಸಾಬರಮತಿ ಎಕ್ಸ್‌ಪ್ರೆಸ್‌ನ ಎಸ್6 ಕೋಚ್‌ಗೆ ಕಲ್ಲು ತೂರಿ ಬೆಂಕಿ ಇಟ್ಟಿದ್ದ ಪ್ರಕರಣಕ್ಕೆ ಸಂಬಂಧಿಸಿದಂತೆ ಕಸಮ್ ಇಬ್ರಾಹಿಂ ಭಮೇದಿ, ಖಾದಿರ್ ಅಬ್ದುಲ್ ಘನಿ ಮತ್ತು ಹುಸೇನ್ ಸುಲೇಮಾನ್ ಎಂಬುವವರನ್ನು ಬಂಧಿಸಲಾಗಿತ್ತು. ಈ ಪ್ರಕರಣಕ್ಕೆ ಸಂಬಂಧಿಸಿದಂತೆ 2011ರಲ್ಲಿ 11 ಮಂದಿಗೆ ಮರಣದಂಡನೆ ಹಾಗೂ 20 ಮಂದಿಗೆ ಜೀವಾವಧಿ ಶಿಕ್ಷೆ ಸೇರಿದಂತೆ ಒಟ್ಟು 31 ಅಪರಾಧಿಗಳಿಗೆ ವಿಶೇಷ ನ್ಯಾಯಾಲಯ ಶಿಕ್ಷೆ ವಿಧಿಸಿತ್ತು. 63 ಆರೋಪಿಗಳನ್ನು ಖುಲಾಸೆಗೊಳಿಸಿತ್ತು.

ರಕ್ತ ನೀಡುವುದು ಬಿಡಿ, ಸೂಜಿಯನ್ನು ಕಂಡರೆ ಹೆದರುತ್ತಿದ್ದ ಉಜ್ವಲ್ ಲಾಡ್ ಎಂಬ ಯುವಕ ಈಗ 'ರಕ್ತ ಅರ್ಚನಾ' ಎಂಬ ಹೆಸರಿನ ರಕ್ತದಾನ ಸಂಸ್ಥೆಯನ್ನು ಹುಟ್ಟುಹಾಕಿ, ಹಲವು ಜನರ ಪ್ರಾಣ ಉಳಿಸಿದ್ದಾನೆ. ಉಜ್ವಲ್‌ನ ರಕ್ತದ ಗುಂಪು 'ಓ ನೆಗೆಟಿವ್'. ರಕ್ತದಾನದ ಮಹತ್ವ, ತಿಳುವಳಿಕೆಯಿಲ್ಲದೆ ಸೂಜಿಗೇ ಭಯಪಡುತ್ತಿದ್ದ ಉಜ್ವಲ್ ಎಂದೂ ರಕ್ತದಾನ ಮಾಡಿರಲಿಲ್ಲ. ತನ್ನ ಊರಿನ 9 ವರ್ಷದ ಮಗುವಿಗೆ ಯಾವುದೋ ಖಾಯಿಲೆಯಾಗಿ 'ಓ ನೆಗೆಟಿವ್' ರಕ್ತದ ತುರ್ತು ಅಗತ್ಯವಿತ್ತು. ಉಜ್ವಲ್‌ಗೆ ಭಯದಿಂದ ರಕ್ತ ನೀಡಲು ನಿರಾಕರಿಸಿದ. ಕೊನೆಗೆ ಅನಾರೋಗ್ಯದಿಂದ ಬಳಲುತ್ತಿದ್ದ ಮಗುವಿನ ಮುತ್ತಜ್ಜ ಉಜ್ವಲ್‌ನ ದುಂಬಾಲು ಬಿದ್ದು ಕೇಳಿಕೊಂಡಾಗ ಮನಪರಿವರ್ತಿತನಾಗಿ ರಕ್ತದಾನ ಮಾಡಿದ. ಮಾತ್ರವಲ್ಲ ಅದೇ ದಿನ 'ರಕ್ತ ಅರ್ಚನಾ' ಎಂಬ ತಂಡವನ್ನು ಕಟ್ಟಿ ರಕ್ತದ ಮಹತ್ವವನ್ನು ತಿಳಿಸುವ, ಜನಜಾಗೃತಿ ಮೂಡಿಸುವ ಹಾಗೂ ರಕ್ತವನ್ನು ಅಗತ್ಯವಿರುವವರಿಗೆ ಒದಗಿಸುವ ಸಂಕಲ್ಪ ಕೈಗೊಂಡ. ಹೀಗೆ ಜನ್ಮತಾಳಿದ ಈ ತಂಡ ಆಸ್ಪತ್ರೆಗೆ ರಕ್ತದ ಅಗತ್ಯ ಕಂಡುಬಂದಾಗ ಅವರ ನೆರವಿಗೆ ಬರುವುದು ಈ ಸಂಸ್ಥೆಯ ಯೋಜನೆ. ಇದೀಗ ದೇಶದ ಹಲವು ಕಡೆ ರಕ್ತ ಅರ್ಚನಾ ತಂಡ ಕೆಲಸ ಮಾಡುತ್ತಿದೆ. ಫೇಸ್ಬುಕ್, ವಾಟ್ಸಾಪ್ ಬಂದ ಬಳಿಕ ಹಲವು ಎಲ್ಲಾ ಊರುಗಳಲ್ಲಿ ತಂಡಗಳು ನಿರ್ಮಾಣಗೊಂಡು, ರಕ್ತದಾನದ ಮಹತ್ಕಾರ್ಯ ನಡೆಯುತ್ತಿದೆ. ಹತ್ತು ವರ್ಷದಿಂದ ನಡೆದುಬಂದಿರುವ ಈ ಸಂಸ್ಥೆ ಈ ವರೆಗೆ 21,000 ರಕ್ತದ ಯುನಿಟ್‌ಗಳನ್ನು ಸಂಗ್ರಹಿಸಿ ಹಲವಾರು ಜನರ ಪ್ರಾಣ ಉಳಿಸಿದೆ.

ಸ್ವಚ್ಛ ಭಾರತ
ಸ್ವಚ್ಛತೆಯೆಡೆಗೆ ಒಂದು ಹೆಜ್ಜೆ

'ಸ್ವಚ್ಛ ಭಾರತ' ಅಭಿಯಾನಕ್ಕೆ ಸಂಬಂಧಿಸಿದಂತೆ ಮಾಹಿತಿ ಹಂಚಿಕೆಗೆ ಹಾಗೂ ಜನರ ಜಾಗೃತಿಗೆ ಅನುಕೂಲವಾಗುವಂತೆ ರಾಷ್ಟ್ರಮಟ್ಟದ ಸಹಾಯವಾಣಿಯನ್ನು ಸದ್ಯದಲ್ಲೇ ಆರಂಭಿಸಲಾಗುವುದು ಎಂದು ಕೇಂದ್ರ ಸರ್ಕಾರ ತಿಳಿಸಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರದ ಇಲಾಖೆಗಳ ಕಚೇರಿಗಳ ಆವರಣಗಳಲ್ಲಿ ಬಳಸದೇ ನಿಲ್ಲಿಸಿರುವ ಹಳೆಯ ವಾಹನಗಳು ಮತ್ತು ಅನುಪಯುಕ್ತ ಕಡತಗಳನ್ನು ವಿಲೇವಾರಿ ಮಾಡುವಂತೆ ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳಿಗೂ ಪತ್ರ ಬರೆದಿದೆ ಎಂದು ಮೂಲಗಳು ತಿಳಿಸಿವೆ.

## ಸಾಲುದ್ದದ ಸುದ್ದಿಗಳು

ಫೆ. 9ರಂದು ನವದೆಹಲಿಯ ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದಲ್ಲಿ ಉಗ್ರ ಅಫ್ಜಲ್ ಪರ ನಡೆದಿದ್ದ ಕಾರ್ಯಕ್ರಮದ ನಾಲ್ಕು ವಿಡಿಯೋಗಳು ಅಸಲಿ ಎಂದು ಕೇಂದ್ರಿಯ ವಿಧಿ ವಿಜ್ಞಾನ ಪ್ರಯೋಗಾಲಯ (ಸಿಎಫ್‌ಎಸ್‌ಐಎಲ್) ಪ್ರಮಾಣೀಕರಿಸಿದ್ದು, ಕಾರ್ಯಕ್ರಮದಲ್ಲಿ ದೇಶದ್ರೋಹಿ ಘೋಷಣೆ ಕೂಗಿದ್ದು ದೃಢಪಟ್ಟಿದೆ. ಸಂಸತ್ ದಾಳಿಕೋರ ಅಫ್ಜಲ್‌ನನ್ನು 2013ರ ಫೆ. 9ರಂದು ತಿಹಾರ್ ಜೈಲಿನಲ್ಲಿ ಗಲ್ಲಿಗೇರಿಸಲಾಗಿತ್ತು. ಇದರ 3ನೇ ವರ್ಷಾಚರಣೆಯನ್ನು ವಿವಿ ವಿದ್ಯಾರ್ಥಿ ಸಂಘದ ಅಧ್ಯಕ್ಷ ಕನ್ಹಯ್ಯಾ ನೇತೃತ್ವದಲ್ಲಿ "ನ್ಯಾಯಾಂಗ ಹತ್ಯೆ' ಎಂಬ ಹೆಸರಲ್ಲಿ ವಿವಿ ಆವರಣದಲ್ಲಿ ಆಯೋಜಿಸಲಾಗಿತ್ತು. ಈ ವೇಳೆ ದೇಶದ್ರೋಹಿ ಘೋಷಣೆಗಳೂ ಕೇಳಿಬಂದಿದ್ದವು. ಈ ಘೋಷಣೆಗಳು ಹಾಗೂ ಕಾರ್ಯಕ್ರಮದ ವಿಡಿಯೋಗಳು ಸಾಮಾಜಿಕ ಜಾಲತಾಣ, ಮಾಧ್ಯಮಗಳಲ್ಲಿ ಪ್ರಸಾರವಾಗಿತ್ತು. ಈ ವಿಡಿಯೋಗಳ ಸತ್ಯಾಸತ್ಯತೆ ಪರಿಶೀಲನೆಗಾಗಿ ಗಾಂಧಿನಗರದ ಸಿಎಫ್‌ಎಸ್‌ಐಎಲ್ ಕೇಂದ್ರಕ್ಕೆ ಕಳುಹಿಸಲಾಗಿತ್ತು. ಜೆಎನ್‌ಯು ವಿವಿಯಲ್ಲಿ ಅನುಮತಿ ಪಡೆಯದೆ ಕಾರ್ಯಕ್ರಮ ಆಯೋಜಿಸಿರುವುದು ವಿವಿಯ ಆಡಳಿತ ಮಂಡಳಿ ನಡೆಸಿದ ತನಿಖೆ ವೇಳೆ ಸಾಬೀತಾಗಿತ್ತು. ಈ ಹಿನ್ನೆಲೆಯಲ್ಲಿ ಕನ್ಹಯ್ಯಾಗೆ 10 ಸಾವಿರ ರೂಪಾಯಿ ದಂಡ ವಿಧಿಸಲಾಗಿದ್ದರೆ, ಖಾಲಿದ್, ಭಟ್ಟಾಚಾರ್ಯನಿಗೆ 20 ಸಾವಿರ ದಂಡ, ಐದು ವರ್ಷಗಳ ಕಾಲ ಕ್ಯಾಂಪಸ್‌ನಿಂದ ನಿರ್ಬಂಧ ಹೇರಲಾಗಿದೆ.

ಪಾಕಿಸ್ತಾನದ ಜತೆ ಬಾಂಧವ್ಯ ಬೆಳೆಸಿಕೊಳ್ಳಬಹುದೆಂಬ ಲೆಕ್ಕಾಚಾರದಿಂದ ಹಿಂದಿನ ಯುಪಿಎ ಸರ್ಕಾರ ಬಿಡುಗಡೆ ಮಾಡಿದ್ದ ಜೈಶ್ ಎ ಮೊಹಮ್ಮದ್ ಸಂಘಟನೆಯ ಉಗ್ರ ಶಾಹಿದ್ ಲತೀಫ್ ಪಠಾಣ್‌ಕೋಟ್ ವಾಯುನೆಲೆ ಮೇಲಿನ ದಾಳಿ ಪ್ರಕರಣದ ಪ್ರಮುಖ ಆರೋಪಿ ಎಂಬ ವಿಚಾರ ಬೆಳಕಿಗೆ ಬಂದಿದೆ. ಸ್ನೇಹವೃದ್ಧಿ ಆಶಯದ ಹೆಸರಿನಲ್ಲಿ ಕೈ ನಾಯಕರು ಕೈಗೊಂಡ ಈ ನಿರ್ಧಾರ ಎಡವಟ್ಟಾಗಿ ದೇಶದ ಭದ್ರತೆಗೇ ಅಪಾಯವುಂಟುಮಾಡಿದ್ದು ದುರಾದೃಷ್ಟ. ಶಾಹಿದ್ ಲತೀಫ್ ಬಿಡುಗಡೆಯಿಂದ ದ್ವಿಪಕ್ಷೀಯ ಸಂಬಂಧ ವೃದ್ಧಿಯಾಗಲಿದೆ ಎಂಬ ಪಾಕಿಸ್ತಾನದ ಅಭಿಪ್ರಾಯ ಪರಿಗಣಿಸಿ, ಭಾರತದ ವಿವಿಧ ಜೈಲುಗಳಲ್ಲಿ 11 ವರ್ಷಗಳಿಂದ ಸೆರೆಯಲ್ಲಿದ್ದ ಶಾಹಿದ್‌ನನ್ನು 'ಸದ್ಭಾವನೆಯ ಸಂಕೇತ'ವಾಗಿ ಮನಮೋಹನ್ ಸಿಂಗ್ ಸರ್ಕಾರ 2011ರ ಮೇ 28ರಂದು ಬಿಡುಗಡೆ ಮಾಡಿ ವಾಘಾ ಗಡಿ ಮೂಲಕ ಪಾಕಿಸ್ತಾನಕ್ಕೆ ಕಳುಹಿಸಿತ್ತು. ಈತನ ಜತೆಗೆ ಇತರೆ 25 ಉಗ್ರರನ್ನೂ ಬಿಡುಗಡೆ ಮಾಡಲಾಗಿತ್ತು. ಇತ್ತೀಚೆಗೆ ಪಠಾಣ್‌ಕೋಟ್ ವಾಯುನೆಲೆ ಮೇಲೆ ದಾಳಿ ನಡೆಸಿದ ತಂಡಕ್ಕೆ ಈತನೇ ನೇತೃತ್ವ ವಹಿಸಿದ್ದನೆಂಬುದು ಇದೀಗ ಬಯಲಾಗಿದ್ದು, ಲತೀಫ್ ಸೇರಿ ನಾಲ್ವರ ವಿರುದ್ಧ ರೆಡ್‌ಕಾರ್ನರ್ ನೋಟಿಸ್ ಜಾರಿ ಮಾಡಲಾಗಿದೆ.




## ಹಳೆ ಪೇಪರ್ ಖರೀದಿಸುವ ಎಂ.ಬಿ.ಎ. ಹುಡುಗರು!

ಜೀವನದಲ್ಲಿ ತಾವೇನಾದರೂ ಸ್ವಂತದ್ದು ಮಾಡಬೇಕೆಂಬ ಆಲೋಚನೆ ಯಾರಿಗೆ ಇರಲ್ಲ. ಆದರೆ ಈ ಆಲೋಚನೆಗೆ ರೂಪಕೊಡಲು ಸ್ಪಷ್ಟ ಗುರಿ ನಿಶ್ಚಯಿಸಿ ಮುಂದಡಿ ಇಡಬೇಕಷ್ಟೆ. ತಮಿಳುನಾಡಿನ ತಿರುಚಿಯ ಚಂದ್ರಕುಮಾರ್ ಎಂ.ಬಿ.ಎ ಶಿಕ್ಷಿತ. ಆದರೆ ಕಾರ್ಯಕ್ಷೇತ್ರದಲ್ಲಿನ ಏರಿಳಿತಗಳಿಂದ ಹೈರಾಣಾಗಿ ಸ್ವಂತ ಉದ್ಯಮ ಮಾಡಲು ನಿಶ್ಚಯಿಸಿದರು. ತನ್ನಂತೆಯೇ ಎಂ.ಬಿ.ಎ. ಶಿಕ್ಷಿತರಾದ ಸತೀಶ್ ಕುಮಾರ್ ಮತ್ತು ಕಾಮರಾಜ್‌ರೊಂದಿಗೆ ಚಂದ್ರಕುಮಾರ್ ತನ್ನ ಕಲ್ಪನೆಯ ಉದ್ಯಮಕ್ಕೆ 2012ರಲ್ಲಿ ಶ್ರೀಕಾರ ಹಾಕಿದರು. ಆ ಕಲ್ಪನೆ ಹಳೆಯ ಪತ್ರಿಕೆ ಸಂಗ್ರಹಿಸುವುದು. ಬಾಲ್ಯದಲ್ಲಿ ಮನೆಗಳಿಗೆ ಪತ್ರಿಕೆಹಂಚುವ ಕೆಲಸಮಾಡುತ್ತಿದ್ದಾಗ ಆ ಮನೆಗಳವರು ಪುನಃ ಹಿಂಪಡೆಯುವಂತೆ ಕೋರುತ್ತಿದ್ದದ್ದನ್ನು ಆಲೋಚಿಸಿದ ಚಂದ್ರಕುಮಾರ್‌ಗೆ, ಇದು ಹೊಸ ಅವಕಾಶದಂತೆ ಕಂಡಿತು. ತಂತ್ರಜ್ಞಾನದ ಸಹಾಯದಿಂದ ಗೆಳೆಯರೊಂದಿಗೆ www.kuppavandi.com ಎಂಬ ಅಂತರ್ಜಾಲ ತಾಣವೊಂದನ್ನು ಪ್ರಾರಂಭಿಸಿದರು (2012ರಲ್ಲಿ). ಈ ವ್ಯವಸ್ಥೆಯಲ್ಲಿ ಅಂತರ್ಜಾಲಕ್ಕೆ ಭೇಟಿ ನೀಡಿದ ತಿರುಚಿಯ ನಿವಾಸಿಗಳು ತಮ್ಮ ಅನುಕೂಲದ ದಿನ, ಸಮಯವನ್ನು ಚಂದ್ರಕುಮಾರ್ ತಂಡಕ್ಕೆ ಮುಂಚಿತವಾಗಿ ತಿಳಿಸುವರು. ಗ್ರಾಹಕರು ತಿಳಿಸಿದ ಸಮಯಕ್ಕೆ ಸರಿಯಾಗಿ ಹಾಜರಿದ್ದು ಹಳೆಯ ಪೆಪರ್‌ಗಳನ್ನು ಕೊಂಡುಕೊಳ್ಳುವುದು ಈ ತ್ರಿವಳಿಗಳ ಕೆಲಸದ ಕ್ರಮ.

ಮೊದಲು ಹಳೆಯ ಪೇಪರ್ ಆಯುವ ಕೆಲಸದವರೆಂದು ಹೀಗಳೆದವರು ಇವರ ಶೈಕ್ಷಣಿಕ ಅರ್ಹತೆ ಮತ್ತು ಉದ್ಯಮಶೀಲತೆಯ ಹಿನ್ನೆಲೆಯನ್ನು ತಿಳಿದು ಗೌರವ ಹಾಗೂ ಆತ್ಮೀಯತೆ ತೋರಿಸುತ್ತಿದ್ದಾರೆ. ಇದೀಗ ಹಂತಹಂತವಾಗಿ ಉದ್ಯೋಗ ಬೆಳೆಯುತ್ತಿದು, ಹಳೆಯ ಪೇಪರ್‌ಗಳಷ್ಟೇ ಅಲ್ಲದೆ ಉಪಯೋಗಿಸಿದ ವಸ್ತುಗಳು, ಇಲೆಕ್ಟ್ರಾನಿಕ್ ತ್ಯಾಜ್ಯ ಮತ್ತು ಖಾಲಿಯಾದ ಹಾಲಿನ ಸ್ಯಾಶೆಗಳವರೆಗೆ ಎಲ್ಲವನ್ನೂ ಸಂಗ್ರಹಿಸಲಾರಂಭಿಸಿದ್ದಾರೆ. ಹೀಗೆ ಖರೀದಿಸಿ ಸಂಗ್ರಹಿಸಿದ ಹಳೆಯ ವಸ್ತುಗಳು ವ್ಯವಸ್ಥಿತವಾಗಿ ಬೇರ್ಪಟ್ಟು ಮಾರುಕಟ್ಟೆಯಲ್ಲಿ ಪುನರ್‌ಬಳಕೆ, ಮಾರಾಟಕ್ಕೆ ಲಭ್ಯವಾಗುತ್ತಿವೆ. ಪರಿಸರ ಸೇವೆಯನ್ನೂ ತಮ್ಮ ಉದ್ಯೋಗದ ಭಾಗವಾಗಿಸಿಕೊಂಡಿರುವ ಇವರು, ತಾವು ವ್ಯವಹರಿಸುವ ಮನೆಗಳಿಗೆ ಚಿಕ್ಕ ಪ್ಲಾಸ್ಟಿಕ್ ಡಬ್ಬಗಳಲ್ಲಿ ಸಸಿಗಳನ್ನು ನೀಡುತ್ತಿದ್ದಾರೆ. ಯಾವ ಕೆಲಸವನ್ನೂ ಸಣ್ಣದು ದೊಡ್ಡದು ಎಂದು ಭಾವಿಸದೆ ಶ್ರದ್ಧೆಯಿಂದ ಮಾಡಿದರೆ ಗೌರವ ಹಣ ಖಂಡಿತ ಲಭಿಸುತ್ತದೆ ಎಂಬುದಕ್ಕೆ ಈ ತ್ರಿಮೂರ್ತಿಗಳೇ ಸಾಕ್ಷಿ.



ಭಾರತದ ಸ್ಟೀಲ್ ಸಿಟಿ ಎಂದೇ ಪ್ರಖ್ಯಾತವಾಗಿರುವ ಜಮಶೇಡಪುರ ಇದೀಗ ಒಳಚರಂಡಿ ವ್ಯವಸ್ಥೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿ ಇಡಿಯ ದೇಶಕ್ಕೆ ಮಾದರಿಯಾಗಲಿದೆ. ಸಂಪೂರ್ಣ ನಗರದ ಒಳಚರಂಡಿ ನೀರನ್ನು ಪುನರ್ಬಳಕೆ ಮಾಡುವಂತಹ ಯೋಜನೆಯೊಂದನ್ನು ಟಾಟಾ ಸ್ಟೀಲ್‌ನ ಅಂಗ ಸಂಸ್ಥೆಯಾದ ಜಸ್ಕೊ ತಯಾರಿಸಿ ಕಾರ್ಯಾರಂಭ ಮಾಡಿದೆ. ಸಾಮಾನ್ಯವಾಗಿ ನಗರ, ಮಹಾನಗರಗಳ ಕೆಲಭಾಗಗಳಲ್ಲಿ ಮಾತ್ರ ಈ ಶುದ್ಧೀಕರಣ ಘಟಕವಿರುತ್ತದೆ. ಆದರೆ ಜಮಶೇಡಪುರದಲ್ಲಿ ಇದೀಗ ಇಂತಹ ವ್ಯವಸ್ಥೆಯನ್ನು ಸಂಪೂರ್ಣ ನಗರಕ್ಕೆ ಅಳವಡಿಸಲಾಗಿದೆ. ದೊಡ್ಡ ಯಂತ್ರಗಳಿಂದ ಶುದ್ಧಗೊಂಡ ಕಲುಷಿತ ನೀರನ್ನು ತೋಟಗಾರಿಕೆ, ಕಾರ್ಖಾನೆಗಳ ಬಳಸುವಿಕೆಕೆ ಉಪಯೋಗಿಸಲು ನಿರ್ಧರಿಸಿದೆ. ಜಮಶೇಡ್‌ಪುರದ ಬಾರ, ಬಿಷ್ಟಾಪುರ ಎಂಬಲ್ಲಿ ಪ್ರಾರಂಭವಾದ ಯೋಜನೆಯಿಂದಲೇ ದಿನಕ್ಕೆ 4ಕೋಟಿ ಲೀಟರ್ ಚರಂಡಿ ನೀರನ್ನು ಶುದ್ಧಗೊಳಿಸಿ ಪುನರ್ಬಳಕೆಯ ದರ್ಜೆಗೆ ತರಬಹುದೆಂದು ಜಸ್ಕೊ ತಿಳಿಸಿದೆ.

## ಉಪ್ಪುನೀರನ್ನು ಸಿಹಿನೀರಾಗಿಸುವ ತಂತ್ರಜ್ಞಾನ ಶೋಧನೆ

ಭಾರತದ 25% ಜನಸಂಖ್ಯೆಯನ್ನ ಬಾಧಿಸುತ್ತಿರುವ ಬರದ ದುರ್ಭರ ಸಂದರ್ಭಕ್ಕೆ ಪರಿಹಾರವೆಂಬಂತೆ ಭಾಭಾ ಆಣುಶಕ್ತಿ ಸಂಶೋಧನ ಸಂಸ್ಥೆಯ ವಿಜ್ಞಾನಿಗಳ ಹೊಸ ಪ್ರಯತ್ನವೊಂದು ಬೆಳಕಿಗೆ ಬಂದಿದೆ. ಈ ಸಂಶೋಧನೆಯು ಸಮುದ್ರದ ಉಪ್ಪುನೀರನ್ನು ಶುದ್ಧೀಕರಿಸಿ ಕುಡಿಯಲು ಉಪಯೋಗಿಸುವಂತೆ ಮಾಡುವುದೇ ಆಗಿದೆ. ಈ ವಿಧಾನದಿಂದ ದಿನಕ್ಕೆ 63 ಲಕ್ಷ ಲೀಟರ್‌ಗಳಷ್ಟು ಸಮುದ್ರದ ನೀರನ್ನು ಪೇಯಜಲವಾಗಿ ಪರಿವರ್ತಿಸಬಹುದು. ಅಷ್ಟೇಅಲ್ಲದೆ ಅಂತರ್ಜಲದಲ್ಲಿ ಸೇರಿರಬಹುದಾದ ಆರ್ಸೆನಿಕ್ ಮತ್ತು ಯುರೇನಿಯಂನಂತಹ ಅಪಾಯಕಾರಿ ಪದಾರ್ಥಗಳನ್ನು ಸಂಸ್ಕರಿಸಿ ಆ ನೀರನ್ನು ಕುಡಿಯಲು ಬಳಸಬಹುದಾದ ತಂತ್ರಜ್ಞಾನವನ್ನೂ ವಿಜ್ಞಾನಿಗಳು ಅಭಿವೃದ್ಧಿಪಡಿಸಿದ್ದಾರೆ. ಪ್ರಸ್ತುತ ತಮಿಳುನಾಡಿನ ಕಲ್ಪಕ್ಕಂ ಆಣುಶಕ್ತಿ ಕಾರ್ಯಾಗಾರದಲ್ಲಿ ಈ ವಿಧಾನದಿಂದ ಶುದ್ಧಿಕರಿಸಿದ ನೀರನ್ನ ಕುಡಿಯಲು ಬಳಸಲಾಗುತ್ತಿದ್ದು, ಇಂತಹ ಹಲವು ಕಾರ್ಯಾಗಾರಗಳು ಈಗಾಗಲೇ ಪಂಜಾಬ್, ಪಶ್ಚಿಮ ಬಂಗಾಳ, ರಾಜಸ್ಥಾನಗಳಲ್ಲಿ ಕಾರ್ಯನಿರತವಾಗಿವೆ. ಪೆಡಲ್ ಮಾಡುವ ಮೂಲಕ ಶುದ್ಧೀಕರಣ ಯಂತ್ರದ ಕಾರ್ಯನಿರ್ವಹಿಸುವಂತೆ ಮಾಡಲಾಗಿದ್ದು, ಬೃಹತ್ ಪ್ರಮಾಣದಲ್ಲಿ ಮಾತ್ರವಲ್ಲದೆ ಮನೆಯಲ್ಲಿ ಬಳಸಬಹುದಾದ ಚಿಕ್ಕ ಜಲಶುದ್ಧೀಕರಣ ಉಪಕರಣಗಳನ್ನೂ ವಿಜ್ಞಾನಿಗಳು ಈಗಾಗಲೇ ಸಿದ್ಧಪಡಿಸಿದ್ದಾರೆ. ಸಂಸ್ಥೆಗೆ ಇತ್ತೀಚಿನ ಭೇಟಿ ನೀಡಿದ ಪ್ರಧಾನಿ ನರೇಂದ್ರ ಮೋದಿ ಸ್ವತ: ಜಲ ಶುದ್ಧೀಕರಣ ಯಂತ್ರವೊಂದನ್ನ ಪೆಡಲ್ ಮಾಡುವ ಮೂಲಕ ಪರೀಕ್ಷಿಸಿ, ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ ಎಂದು ಸಂಸ್ಥೆಯ ನಿರ್ದೇಶಕ ಕೆ.ಎನ್. ವ್ಯಾಸ್ ತಿಳಿಸಿದ್ದಾರೆ.



पुंगव PUNGAVA
# 74, Ranga Rao Road,
Shankarapuram, Bangalore - 560 004.
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00

REGISTERED NEWS PAPER RNI 36528/79 LICENCED TO POST WITHOUT PREPAYMENT-WPP46 AT BENGALURU PSO, BG-560 026 on 10/25 of every Month REG.NO.CPMG/KA/BGS/102/2015-17

1-6-2016





## ಆರೆಸ್ಸೆಸ್ ಸಂಘ ಶಿಕ್ಷಾ ವರ್ಗ
### ರಾಜ್ಯದ 1188 ಮಂದಿಗೆ ತರಬೇತಿ

ರಾಷ್ಟ್ರೀಯ ಸ್ವಯಂಸೇವಕ ಸಂಘವು ಕಾರ್ಯಕರ್ತರಿಗೆ ಪ್ರಶಿಕ್ಷಣ ನೀಡಲು ಸಂಘ ಶಿಕ್ಷಾವರ್ಗಗಳನ್ನು ಪ್ರತೀವರ್ಷ ಆಯೋಜಿಸಲಾಗುತ್ತದೆ. ಈ ಬಾರಿಯ ಪ್ರಶಿಕ್ಷಣ ವರ್ಗದಲ್ಲಿ ರಾಜ್ಯದ ಒಟ್ಟು ಆಯ್ದ 1188 ಕಾರ್ಯಕರ್ತರು ಭಾಗವಹಿಸಿದ್ದರು.

ಮಂಗಳೂರಿನ ತಲಪ್ಪಾಡಿಯ ಕಿನ್ಯಾದ ಶಾರದಾ ವಿದ್ಯಾನಿಕೇತನದಲ್ಲಿ ನಡೆದ ಕರ್ನಾಟಕ ದಕ್ಷಿಣ ಪ್ರಾಂತದ ಪ್ರಥಮ ವರ್ಷದ ಸಂಘ ಶಿಕ್ಷಾ ವರ್ಗದಲ್ಲಿ 769 ಕಾರ್ಯಕರ್ತರು ಭಾಗವಹಿಸಿದ್ದರು. ಕರ್ನಾಟಕ ಉತ್ತರ ಪ್ರಾಂತದ ಪ್ರಥಮ ವರ್ಷ ಸಂಘ ಶಿಕ್ಷಾ ವರ್ಗ ಹಾಗೂ ಕರ್ನಾಟಕ ಉತ್ತರ ಮತ್ತು ದಕ್ಷಿಣ ಪ್ರಾಂತದ ದ್ವಿತೀಯ ವರ್ಷದ ಸಂಘ ಶಿಕ್ಷಾ ವರ್ಗವು ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ನಡೆದಿದ್ದು, ಒಟ್ಟು 419 ಕಾರ್ಯಕರ್ತರು ಸಂಘದ ಪ್ರಶಿಕ್ಷಣ ಪಡೆದಿದ್ದಾರೆ.

ಈ ವರ್ಗದಲ್ಲಿ ಶಾರೀರಿಕ–ಬೌದ್ಧಿಕ ಪ್ರಶಿಕ್ಷಣಗಳ ಜೊತೆಗೆ ರಾಷ್ಟ್ರೀಯ ವಿಚಾರಗಳ ಕುರಿತ ಚರ್ಚೆ–ಪ್ರಶ್ನೋತ್ತರ, ಪರಿಸರ ಸಂರಕ್ಷಣೆ, ಸೇವೆ, ಸಾಮರಸ್ಯ, ಅನುಶಾಸನ ಮುಂತಾದ ವಿಷಯಗಳ ಕುರಿತು ತಜ್ಞರಿಂದ ಪ್ರಶಿಕ್ಷಣ ನೀಡಲಾಗುತ್ತದೆ. ಆರೆಸ್ಸೆಸ್ ಶಾಖೆಗಳ ಮೂಲಕ ಆರಿಸಲ್ಪಟ್ಟ ಆಯ್ದ ಕಾರ್ಯಕರ್ತರಿಗೆ ಮಾತ್ರ ಈ ಪ್ರಶಿಕ್ಷಣ ನೀಡಲಾಗುತ್ತದೆ. ಆರೆಸ್ಸೆಸ್ ಸರಕಾರ್ಯವಾಹ ಸುರೇಶ ಭೈಯ್ಯಾಜಿ ಜೋಷಿ, ಸಹ ಸರಕಾರ್ಯವಾಹ ದತ್ತಾತ್ರೇಯ ಹೊಸಬಾಳೆ, ಆರೆಸ್ಸೆಸ್‌ನ ಅಖಿಲ ಭಾರತೀಯ ಪದಾಧಿಕಾರಿಗಳಾದ ಮಂಗೇಶ್ ಭೇಂಡೆ, ಮುಕುಂದ ಸಿ.ಆರ್, ಸುರೇಶ್ ಚಂದ್ರ ಮುಂತಾದವರು ಶಿಬಿರಗಳಿಗೆ ಆಗಮಿಸಿ ಮಾರ್ಗದರ್ಶನ ಮಾಡಿದ್ದಾರೆ.

ದಕ್ಷಿಣ ಭಾರತದ ಐದು ರಾಜ್ಯಗಳ ವಿಶೇಷ ದ್ವಿತೀಯ ವರ್ಷ ಸಂಘ ಶಿಕ್ಷಾವರ್ಗವು ಆಂಧ್ರದ ಅನಂತಪುರ ಜಿಲ್ಲೆಯ ರಾಚನಪಲ್ಲಿಯ ಸೈಂಟ್ ಜೋಸೆಫ್ ವಿದ್ಯಾಲಯದಲ್ಲಿ ನಡೆಯಿತು. ಕರ್ನಾಟಕದ 35 ಮಂದಿ ಸೇರಿದಂತೆ ಒಟ್ಟು 158 ಕಾರ್ಯಕರ್ತರು ಭಾಗವಹಿಸಿದ್ದರು. ಅಖಿಲ ಭಾರತ ಮಟ್ಟದ ತೃತೀಯ ವರ್ಷದ ಸಂಘ ಶಿಕ್ಷಾವರ್ಗವು ಮಹಾರಾಷ್ಟ್ರದ ನಾಗಪುರದ ರೇಶಿಂಭಾಗ್‌ನಲ್ಲಿ ಮೇ 15 ರಿಂದ ಜೂನ್ 10ರ ವರೆಗೆ ನಡೆಯಲಿದೆ.



## ಹಿಂಸೆ ಕೊನೆಗೊಳಿಸಿ ಕಮ್ಯುನಿಸ್ಟರಿಗೆ ಆರೆಸ್ಸೆಸ್ ಆಗ್ರಹ

ಕೇರಳದಲ್ಲಿ ಆರೆಸ್ಸೆಸ್ ಹಾಗೂ ಹಿಂದೂ ಪರ ಸಂಘಟನೆಗಳ ಕಾರ್ಯಕರ್ತರ ಮೇಲೆ ನಿರಂತರವಾಗಿ ನಡೆಯುತ್ತಿರುವ ಹಿಂಸಾತ್ಮಕ ಚಟುವಟಿಕೆಗಳನ್ನು ನಿಲ್ಲಿಸುವಂತೆ ಆರೆಸ್ಸೆಸ್ ಆಗ್ರಹಿಸಿದೆ.

ಇತ್ತೀಚೆಗೆ ಕೇರಳ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಕಮ್ಯುನಿಸ್ಟ್ ನೇತೃತ್ವದ ಎಲ್‌ಡಿಎಫ್ ಸ್ಪಷ್ಟ ಬಹುಮತ ಗಳಿಸಿತ್ತು. ಈ ವಿಜಯೋತ್ಸವದಲ್ಲಿ ಕಣ್ಣೂರು, ಕಾಸರಗೋಡು ಸೇರಿದಂತೆ ಕೇರಳದೆಲ್ಲೆಡೆ ಸುಮಾರು 200ಕ್ಕೂ ಅಧಿಕ ಕಡೆಗಳಲ್ಲಿ ಅಂಗಡಿ, ಮನೆಗಳ ಮೇಲೆ ದಾಳಿ ಮಾಡಿದ ಕಮ್ಯುನಿಸ್ಟ್ ಕಾರ್ಯಕರ್ತರು ಅಪಾರ ಆಸ್ತಿಪಾಸ್ತಿ ಹಾನಿ ಮಾಡಿದ್ದರು. ಮಾತ್ರವಲ್ಲದೇ ಹಿಂದೂಪರ ಕೆಲಸ ಮಾಡಿದ ಕಾರ್ಯಕರ್ತರ ಮೇಲೆ ಹಲ್ಲೆ ನಡೆಸಿದ ಕಮ್ಯುನಿಸ್ಟ್ ಗುಂಡಾಗಳು ಪ್ರಮೋದ್ ಎಂಬ ಹಿಂದೂ ಸಂಘಟನೆಯ ಕಾರ್ಯಕರ್ತನನ್ನು ಭೀಕರವಾಗಿ ಹತ್ಯೆಗೈದಿದ್ದರು. ಇದನ್ನು ತೀವ್ರವಾಗಿ ಖಂಡಿಸಿರುವ ಆರೆಸ್ಸೆಸ್‌ನ ಅಖಿಲ ಭಾರತೀಯ ಸಹ ಪ್ರಚಾರ ಪ್ರಮುಖ್ ನಂದಕುಮಾರ್, ಕಮ್ಯುನಿಸ್ಟ್ ದೌರ್ಜನ್ಯದ ವಿರುದ್ಧ ಚರ್ಚಿಸಲು ಸರ್ವ ಪಕ್ಷಗಳ ನಿಯೋಗವೊಂದನ್ನು ಕರೆದುಕೊಂಡು ಕಮ್ಯುನಿಸ್ಟರ ಭದ್ರಕೋಟೆಯೆನಿಸಿರುವ ಕಣ್ಣೂರಿನ ಪಿಣಾರಾಯ್‌ಗೆ ಬೇಟಿ ನೀಡುವಂತೆ ಸಿಪಿಎಂ ಮುಖಂಡ ಸಿತಾರಾಮ್ ಯೆಚೂರಿ ಅವರಿಗೆ ಆಗ್ರಹಿಸಿದ್ದಾರೆ.


## ಗುಳೆಹೋದವ ಮಹಾರಾಷ್ಟ್ರದ ಶಿಕ್ಷಣ ರಾಯಭಾರಿ!




ಹೊಟ್ಟೆಪಾಡಿಗೆ ಕಷ್ಟಪಟ್ಟು ಗುಳೆಹೋದ ಸೋಮನಾಥ್ ಗಿರಮ್ ಇಂದು ರಾಜ್ಯ ಶಿಕ್ಷಣ ಕ್ಷೇತ್ರದ ರಾಯಭಾರಿಯಾಗಿ ಗುರುತಿಸಿಕೊಂಡಿದ್ದಾನೆ. ಈತನ ಜೀವನ ಕಥನ ಇಂದಿನ ಪೀಳಿಗೆಗೆ ದಾರಿದೀಪವಾದುದು ಮಹಾರಾಷ್ಟ್ರದ ಸೋಲಾಪುರದ ಬಡರೈತನ ಮಗನಾದ ಸೋಮನಾಥ್ ಕಷ್ಟಪಟ್ಟು ಪದವಿಪೂರ್ವ ಶಿಕ್ಷಣ ಮುಗಿಸಿ, ಪದವಿಗೆ ಸೇರಿದ್ದ. ಆದರೆ ಮನೆಯ ಬಡತನದಿಂದ ಬಿ.ಕಾಂ. ಪೂರ್ಣ ಮಾಡುವುದು ಅಶಕ್ಯವಾಯಿತು. ಓದನ್ನು ಅರ್ಧಕ್ಕೆ ನಿಲ್ಲಿಸಿ ಪುಣೆ ನಗರಕ್ಕೆ 2006ರಲ್ಲಿ ಗುಳೆ ಹೋದ. ಹೊಟ್ಟೆ ತುಂಬಬೇಕು, ಜೊತೆಗೆ ವಿದ್ಯಾಭ್ಯಾಸವೂ ಮುಂದುವರಿಸಬೇಕೆಂಬ ಅತೀವ ಆಸೆ ಆತನದ್ದು. ಆಗ ಸೋಮನಾಥ್ ಹೊಳೆದದ್ದು ಬೀದಿಬದಿ ಚಹಾಮಾರುವ ವೃತ್ತಿ. ಹಗಲುಪೂರ್ತಿ ಮೈದಣಿಸುವ ಚಹಾ ಮಾರಿ, ನಂತರ ರಾತ್ರಿ ಅರ್ಧಕ್ಕೆ ಬಿಟ್ಟಿದ್ದ ಶಿಕ್ಷಣವನ್ನು ಪೂರ್ಣಗೊಳಿಸುವುದಕ್ಕೆ ಶ್ರಮಪಡತೊಡಗಿದ. 10 ವರ್ಷಗಳವರೆಗಿನ ದಣಿವರಿಯದ ಸತತ ಪರಿಶ್ರಮಪಟ್ಟ ಸೋಮನಾಥ, ಚಹಾ ಅಂಗಡಿಯಲ್ಲಿ ತಿಂಗಳಿಗೆ 10,000–12,000 ಸಂಪಾದಿಸುವ ಜೊತೆಗೆ ಬಿ.ಕಾಮ್ ಪದವಿ, ಎಂ.ಕಾಂ ಮತ್ತು ಎಲ್ಲಕ್ಕೂ ಮಿಗಿಲಾಗಿ ಕೇವಲ 5% ಜನ ಮಾತ್ರ ಉತ್ತೀರ್ಣರಾಗುವಂತಹ ಕಠಿಣ ಸಿ.ಎ. ಪರೀಕ್ಷೆಯನ್ನೂ ಯಶಸ್ವಿಯಾಗಿ ಪೂರ್ಣಗೊಳಿಸಿದ್ದಾರೆ. ಇದೀಗ ಪುಣೆಯ ಚಾರ್ಟರ್ಡ್ ಅಕೌಂಟೆನ್ಸಿ ಸಂಸ್ಥೆಯೊಂದರಲ್ಲಿ ಉದ್ಯೋಗ ಮಾಡುತ್ತ, ಕೈತುಂಬ ಹಣ ಸಂಪಾದಿಸುತ್ತಿದ್ದಾರೆ. ತನ್ನ ಜೀವನಕ್ಕೆ ದಾರಿ ತೋರಿದ ಚಹಾ ಅಂಗಡಿಯನ್ನು ತನ್ನಂತೆಯೇ ಹಳ್ಳಿತೊರೆದು ಪಟ್ಟಣ ಸೇರಿರುವ ಮತ್ತೊಬ್ಬ ವ್ಯಕ್ತಿಗೆ ಬಾಡಿಗೆಗೆ ನೀಡಿದ್ದಾರೆ. ಇವರನ್ನು ಗುರುತಿಸಿರುವ ಮಹಾರಾಷ್ಟ್ರ ಸರ್ಕಾರ ಸೋಮನಾಥ್‌ರನ್ನು ರಾಜ್ಯ ಶಿಕ್ಷಣ ಕ್ಷೇತ್ರದ ರಾಯಭಾರಿಯಾಗಿ ಗುರುತಿಸಿದೆ. ರಾಜ್ಯ ಸರ್ಕಾರದ ಪರವಾಗಿ ಸೋಮನಾಥ್ ಈಗ ಕಾಲೇಜ್ ವಿದ್ಯಾರ್ಥಿಗಳಿಗೆ ತನ್ನಂತೆಯೇ ಗಳಿಕೆಯೊಂದಿಗೆ ಕಲಿಕೆಯ ಮಾದರಿಯ ಶಿಕ್ಷಣವನ್ನು ಅಳವಡಿಸಿಕೊಳ್ಳುವಂತೆ ಪ್ರೇರೇಪಿಸಲು ಉಪನ್ಯಾಸಕರಾಗಿ ಅಣಿಗೊಳ್ಳುತ್ತಿದ್ದಾರೆ.

## ಜಲಸಂರಕ್ಷಣೆಗೆ ನರೇಂದ್ರ ಮೋದಿ ಕರೆ

ಪ್ರತಿ ಹನಿ ನೀರು ದೇವರ ಪ್ರಸಾದವಿದ್ದಂತೆ. ಜಲವನ್ನು ಸಂರಕ್ಷಿಸಬೇಕಾದ್ದು ಪ್ರತಿಯೊಬ್ಬ ನಾಗರಿಕನ ಕರ್ತವ್ಯ. ಮುಂಗಾರು ಅವಧಿಯಲ್ಲಿ ಒಂದು ಹನಿ ನೀರನ್ನೂ ವ್ಯರ್ಥ ಮಾಡದಂತೆ ಕಾಪಾಡುವುದಾಗಿ ಪ್ರತಿಯೊಬ್ಬರೂ ಪ್ರತಿಜ್ಞೆ ಕೈಗೊಳ್ಳಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದಾರೆ. 'ಮನ್ ಕೀ ಬಾತ್' ತಿಂಗಳ ಬಾನುಲಿ ಕಾರ್ಯಕ್ರಮದಲ್ಲಿ ದೇಶವನ್ನುದ್ದೇಶಿಸಿ ಮಾತನಾಡಿದ ಪ್ರದಾನಿ ನರೇಂದ್ರ ಮೋದಿ, ಇದಕ್ಕಾಗಿ ದೇಶದಾದ್ಯಂತ ಅರಣ್ಯ ಮತ್ತು ಜಲ ಸಂರಕ್ಷಣೆ ನಿಟ್ಟಿನಲ್ಲಿ ಬೃಹತ್ ಜನಾಂದೋಲನ ನಡೆಯಬೇಕು ಎಂದರು. ಕರ್ನಾಟಕದಾದ್ಯಂತ ಹತ್ತಾರು ಕೆರೆಗಳನ್ನು ಸ್ವಚ್ಛಗೊಳಿಸಿ ಜಲಸಂರಕ್ಷಣೆಯಲ್ಲಿ ಗಣನೀಯ ಸಾಧನೆ ಮಾಡಿರುವ ಯುವಾ ಬ್ರಿಗೇಡ್ ಸೇರಿದಂತೆ ದೇಶದ ಕೆಲ ಸಂಸ್ಥೆಗಳ ಕಾರ್ಯವನ್ನು ಮೋದಿ ಶ್ಲಾಘಿಸಿದರು.



ಮೂರು ತಿಂಗಳ ಅವಧಿಯವರೆಗೆ ಯೋಗ, ಧ್ಯಾನ ಮತ್ತು ವಿಶೇಷವಾಗಿ ಕೀರ್ತನಗಳಲ್ಲಿ ತೊಡಗಿಸಿಕೊಳ್ಳುವುದು ಸ್ಮರಣ ಶಕ್ತಿಯನ್ನು ಹೆಚ್ಚಿಸಲು ಸಹಕಾರಿಯಾಗುತ್ತದೆ ಎಂದು ಅಮೆರಿಕಾದ ವಿಜ್ಞಾನಿಗಳ ತಂಡವೊಂದು ಸಂಶೋಧನೆಗಳಿಂದ ಧೃಢಪಡಿಸಿದೆ. ಲಾಸ್ ಏಂಜಲೀಸ್‌ನ ಯೂನಿವರ್ಸಿಟಿ ಆಫ್ ಕ್ಯಾಲಿಫೋರ್ನಿಯಾದ (ಯುಸಿಎಲ್‌ಎ) ನರವಿಜ್ಞಾನಿಗಳ ತಂಡದ ಸಂಶೋಧನೆಯ ಪ್ರಕಾರ ಯೋಗ ಮತ್ತು ಧ್ಯಾನವನ್ನು ಸತತವಾಗಿ ಅಭ್ಯಾಸ ಮಾಡಿದಲ್ಲಿ ಬುದ್ಧಿಮಾಂದ್ಯತೆ ಮತ್ತು ಭಾವನಾತ್ಮಕ ಕಲಿಕೆಯಲ್ಲಿನ ಸಮಸ್ಯೆಗಳನ್ನು ಕಡಿಮೆ ಮಾಡುವಲ್ಲಿ ನೆರವಾಗುತ್ತವೆ ಎಂದು ಕಂಡುಬಂದಿದೆ. ವೈದ್ಯಕೀಯ ಸಂಶೋಧನೆಯಲ್ಲಿ ದಿನವೊಂದಕ್ಕೆ ಕೇವಲ 12 ನಿಮಿಷ ಅವಧಿಯ ಕೀರ್ತನೆಯ ಅಭ್ಯಾಸ ಮಿದುಳಿನ ಸಂವೇದನೆ ಸುಧಾರಿಸಲು ಮತ್ತು ಸ್ಮರಣೆಗೆ ಸಂಬಂಧಿಸಿದ ಮಸ್ತಕದ ಭಾಗಗಳನ್ನು ಸಕ್ರಿಯಗೊಳಿಸಿ ವಿಶೇಷ ಪ್ರಯೋಜನೆ ನೀಡುತ್ತದೆ ಎಂದು ವಿಜ್ಞಾನಿಗಳ ತಂಡ ನಿರೂಪಿಸಿದೆ.



## ಎಲ್ಲದಕ್ಕೂ 'ಗಾಂಧಿ'ಗಳ ಹೆಸರೇಕೆ? : ರಿಷಿ ಕಪೂರ್

ಕೇಂದ್ರದಲ್ಲಿ ಕಾಂಗ್ರೆಸ್ ಆಡಳಿತದ ಅವಧಿಯಲ್ಲಿ ದೇಶದ ಸಾರ್ವಜನಿಕ ಆಸ್ತಿಗಳಿಗೆ ಹಾಗೂ ಸರ್ಕಾರಿ ಯೋಜನೆಗಳಿಗೆ ಗಾಂಧಿ ಕುಟುಂಬದವರ ಹೆಸರಿಟ್ಟಿರುವುದನ್ನು ಬದಲಿಸಬೇಕು ಎಂದು ಹಿಂದಿ ಚಿತ್ರ ನಟ ರಿಷಿ ಕಪೂರ್ ಆಗ್ರಹಿಸಿದ್ದಾರೆ.

ರಸ್ತೆಗಳಿಗೆ, ವಿಮಾನ ನಿಲ್ದಾಣಗಳಿಗೆ ಗಾಂಧಿ ಕುಟುಂಬದ ಹೆಸರಿಡಲು ಅವೇನು ಅವರಪ್ಪನ ಮನೆಯ ಆಸ್ತಿಯೆ? (ಬಾಪ್ ಕ ಮಾಲ್ ಸಮಜಾ ರಖಾ ತಾ?)' ಎಂದು ಪ್ರಶ್ನಿಸಿದ ಅವರು, ದೇಶದದಲ್ಲಿ ಗಮನಾರ್ಹವಾದ ಸಾಧನೆ ಮಾಡಿ, ವಿಶ್ವಕ್ಕೆ ಚಿರಪರಿಚಿತರಾದ ಅನೇಕ ವ್ಯಕ್ತಿಗಳಿದ್ದಾರೆ. ಸ್ವಾತಂತ್ರ್ಯ ಹೋರಾಟಗಾರರಿದ್ದಾರೆ. ಮಹಾತ್ಮಾ ಗಾಂಧಿ, ಭಗತ್ ಸಿಂಗ್, ಅಂಬೇಡ್ಕರ್ ಇಂಥವರ ಹೆಸರನ್ನು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಗಳಿಗೆ ಸೂಚಿಸುವ ಬದಲು ಅಲ್ಲೂ ಗಾಂಧಿ ಕುಟುಂಬದ ಹೆಸರನ್ನೇ ನೀಡಲಾಗಿದೆ. ಫಿಲ್ಮ್ ಸಿಟಿಗೆ ದಿಲೀಪ್ ಕುಮಾರ, ದೇವಾನಂದ್, ಅಶೋಕ್ ಕುಮಾರ್, ಅಮಿತಾಭ್ ಬಚ್ಚನ್ ಹೆಸರನ್ನು ನೀಡುವುದು ಬಿಟ್ಟು, ರಾಜೀವ್‌ಗಾಂಧಿ ಉದ್ಯೋಗ ಎಂದರೇನು? ಮೊಹ್ಮದ್ ರಫಿ, ಮನ್ನಾಡೆ, ಕಿಶೋರ್ ಕುಮಾರ್ ತಮ್ಮ ಕಂಚಿನ ಕಂಠದ ಮೂಲಕ ಸಮಸ್ತ ಜನತೆಗೆ ಹತ್ತಿರವಾಗಿದ್ದಾರೆ. ಇನ್ನು ರಾಜ್ ಕಪೂರ್ ಅವರು ತಮ್ಮ ಮರಣಾನಂತರ ಕೂಡ ದೇಶ ಹೆಮ್ಮೆ ಪಡುವಂತಹ ಸಾಧನೆ ಮಾಡಿದ್ದಾರೆ ಎನ್ನುವ ಮೂಲಕ ಬಾಲಿವುಡ್ ನಟ ಕಾಂಗ್ರೆಸ್ ವಿರುದ್ಧ ಬಹಿರಂಗವಾಗಿ ಕಿಡಿ ಕಾರಿದ್ದಾರೆ.

## ದಿಶಾ ಭಾರತ್ ಜಿಲ್ಲಾ ಸಂಯೋಜಕರಿಗೆ ಆಹ್ವಾನ

**ಕಾಲೇಜು ವಿದ್ಯಾರ್ಥಿಗಳಲ್ಲಿ ರಾಷ್ಟ್ರೀಯ ವಿಚಾರಗಳನ್ನು ಪೋಷಿಸುವ 'ದಿಶಾ ಭಾರತ್' ಸಂಸ್ಥೆಯು ರಾಜ್ಯದ ಜಿಲ್ಲಾ ಕೇಂದ್ರಗಳಲ್ಲಿ ಸಂಯೋಜಕ\ಸಂಯೋಜಕಿ (Coordinator)ಕಾರ್ಯನಿರ್ವಹಿಸಬಲ್ಲ ಯುವ ವಿದ್ಯಾವಂತರಿಗೆ 2 ದಿನಗಳ ಪ್ರಶಿಕ್ಷಣ ಶಿಬಿರವೊಂದನ್ನು ಜೂನ್ 4 ಮತ್ತು 5ರಂದು ಬೆಂಗಳೂರಿನಲ್ಲಿ ಏರ್ಪಡಿಸಿದೆ. ತರಬೇತಿಯ ನಂತರ ಆಯ್ಕೆಗೊಂಡ ಜಿಲ್ಲಾ ಸಂಯೋಜಕ/ಸಂಯೋಜಕಿಯರಿಗೆ ಸೂಕ್ತ ಸಂಭಾವನೆಯನ್ನು ನೀಡಲಾಗುವುದು.**

**ವಿವರಗಳಿಗೆ ಸಂಪರ್ಕಿಸಿ :**
**ಶ್ರೀಮತಿ ಸ್ನೇಹ ದಾಮ್ಲೆ : 9611533533**
**ಶ್ರೀಮತಿ ರೇಖಾ ರಾಮಚಂದ್ರನ್ 9845681573**

ಸಂಪಾದಕ–ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು–04. ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು–19.
ಚಂದಾ/ನವೀಕರಣ/ವಿಳಾಸ ಬದಲಾವಣೆಗಾಗಿ ಸಂಪರ್ಕಿಸಿ : #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು–04. ಮೊಬೈಲ್: 97391 83021 ಸಂಪಾದಕೀಯ : 97312 64009